ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : 246161, 246165.
ದೂರವಾಣಿ ಸಂಖ್ಯೆ:08182-246165 E-Mail:shimulpandi@gmail.com Fax:08182-246284.

# ತಾಂತ್ರಿಕ ಟೆಂಡರ್ ಭಾಗ –1

**ಟೆಂಡರ್‌ದಾರರು ತಾಂತ್ರಿಕ ಟೆಂಡರ್ ಮತ್ತು ವಾಣಿಜ್ಯ ಟೆಂಡರ್ ದಾಖಲಾತಿಗಳನ್ನು ಮತ್ತು ಇ.ಎಂ.ಡಿ. ಮೊತ್ತದೊಂದಿಗೆ ನಿಗದಿತ ಶುಲ್ಕ ಪಾವತಿಸಿ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರವೇ ಅಪ್‌ಲೋಡ್ ಮಾಡತಕ್ಕದ್ದು.**

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : 246161, 246165.**

---

# ತಾಂತ್ರಿಕ ಟೆಂಡರ್

## ದ್ವೈವಾರ್ಷಿಕ ದರ ಗುತ್ತಿಗೆ

**ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿನ ಬಿ.ಎಂ.ಸಿ. ಕೇಂದ್ರಗಳಿಂದ** ಶೀಥಲೀಕರಿಸಿದ ಹಾಲನ್ನು ಡೇರಿ/ಶೀಥಲೀಕರಣ ಕೇಂದ್ರಗಳಿಗೆ ಸಾಗಾಣಿಕೆ ಮಾಡಲು ಸ್ಟೇನ್‌ಲೆಸ್ ಸ್ಟೀಲ್ ಇನ್ಸುಲೇಟೆಡ್ ಕಂಟೇನರ್ ಬಾಡಿ ಅಳವಡಿಸಿದ ವಿವಿಧ ಸಾಮರ್ಥ್ಯದ 2011 ರ ಅಥವಾ ನಂತರದ ಸಾಲಿನ ಮಾದರಿಯ ಹಾಲು ಸಾಗಾಣಿಕೆ ಟ್ಯಾಂಕರ್ ವಾಹನಗಳನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ತಾಂತ್ರಿಕ ಟೆಂಡರ್.

## ತಾಂತ್ರಿಕ ಟೆಂಡರ್ ಭಾಗ—1

| | | |
|---|---|---|
| 1 | ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ | ದಿನಾಂಕ: 25.10.2023 ರಿಂದ |
| 2 | ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ | ದಿನಾಂಕ: 15.11.2023 ರಂದು ಸಂಜೆ: 17.30 ಗಂಟೆಯವರೆಗೆ |
| 4 | **ಭರ್ತಿ ಮಾಡಿದ ಟೆಕ್ನಿಕಲ್ ಟೆಂಡರ್ ತೆರೆಯುವ** | ದಿನಾಂಕ: 17.11.2023 ರಂದು ಬೆಳಿಗ್ಗೆ: 11.30 ಗಂಟೆಯ ನಂತರ |
| 5 | **ಭರ್ತಿ ಮಾಡಿದ ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ** | ದಿನಾಂಕ: 20.11.2023 ರಂದು ಬೆಳಿಗ್ಗೆ: 11.30 ಗಂಟೆಯ ನಂತರ |

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : 246161, 246165.**

---

**ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಶೇಮತಾಂ/ಟೆಂಡರ್/ 6184/2023–24 ದಿನಾಂಕ: 25.10.2023**

**KMF/2023-24/SE0933**

**–: *ಬಿ.ಎಂ.ಸಿ. ಕೇಂದ್ರಗಳ ಹಾಲು ಸಾಗಾಣಿಕೆಗೆ ಹಾಲಿನ ಟ್ಯಾಂಕರ್‌ಗಳನ್ನು ಗುತ್ತಿಗೆ ಆಧಾರದಲ್ಲಿ ದ್ವೈವಾರ್ಷಿಕ ಅವಧಿಗೆ ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ* :–**

ಅ) ಶಿವಮೊಗ್ಗ/ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯ ವಿವಿದೆಡೆ ಸ್ಥಾಪಿಸಿರುವ ಬಿ.ಎಂ.ಸಿ. ಕೇಂದ್ರಗಳಿಂದ ಶಿವಮೊಗ್ಗ /ದಾವಣಗೆರೆ ಡೇರಿ/ತಡಗಣಿ/ಆನಂದಪುರ/ಹೊಸದುರ್ಗ ಶೀಥಲೀಕರಣ ಕೇಂದ್ರ ಮತ್ತು ಚಿತ್ರದುರ್ಗ ಶೀತಲೀಕರಣ ಕೇಂದ್ರಗಳಿಗೆ ಹಾಲಿನ ಸಾಗಾಣಿಕೆ ಟ್ಯಾಂಕರ್ ಮೂಲಕ ಹಾಲು ಸಾಗಾಣಿಕೆ ಮಾಡಲು 2011 ರ ಅಥವಾ ನಂತರ ಮಾದರಿಯ ಸುಸ್ಥಿತಿಯಲ್ಲಿರುವ ಕನಿಷ್ಠ ಸಾಮರ್ಥ್ಯ 09 ಕೆ.ಎಲ್ ಹಾಲಿನ ಟ್ಯಾಂಕರ್‌ನ್ನು ಒದಗಿಸಲು ಟೆಂಡರ್ ಕರೆದಿದ್ದು, ವಾಹನಗಳ ಗುತ್ತಿಗೆ ಅವಧಿ ಎರಡು ವರ್ಷದ್ದಾಗಿರುತ್ತದೆ

ಆ) ಕ್ರ.ಸಂ 1 ರ ಹಾಲು ಸಾಗಾಣಿಕೆ ಟ್ಯಾಂಕರ್ ಮಾರ್ಗಕ್ಕೆ ಪ್ರಕಟಿಸಿದಂತೆ **ನಿಗದಿತ ಸಾಮರ್ಥ್ಯದ ಎಸ್.ಎಸ್. ಇನ್ಸೂಲೆಟೆಡ್ ಹಾಲಿನ ಟ್ಯಾಂಕರ್ ವಾಹನ ಹೊಂದಿದವರು ಮಾತ್ರ** (ಆರ್.ಸಿ. ಪುಸ್ತಕದಲ್ಲಿ ಹಾಲಿನ ಟ್ಯಾಂಕರ್ ಮತ್ತು ಸಾಮರ್ಥ್ಯ ದಾಖಲಾಗಿರಬೇಕು) ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ. ವಾಹನಕ್ಕೆ ಸಂಬಂಧಿಸಿದ **B-extract report from the RTO, Upadated RC book including Fitness Certificate, Permit, Insurance, Ownership, Emmission test, Capacity of tanker as per RC book details** ಮುಂತಾದ ಎಲ್ಲಾ ನವೀಕರಣ ದಾಖಲಾತಿಗಳನ್ನು ಅಥವಾ ಸಾರಿಗೆ ಇಲಾಖೆಯಿಂದ ಪಡೆದ ವಾಹನದ ಬಿ.ಎಕ್ಸಾಟ್ರ್ಯಾಕ್ಟ್ ರಿಪೋರ್ಟ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ. **ಒಕ್ಕೂಟದ ವ್ಯಾಪ್ತಿಯಲ್ಲಿ ಮೇಲೆ ತಿಳಿಸಿರುವ ಮಾರ್ಗಗಳಲ್ಲಿ ಹಾಲಿ ಚಲಿಸುತ್ತಿರುವ ಟ್ಯಾಂಕರ್‌ಗಳನ್ನು ಹೊರತುಪಡಿಸಿ ಟೆಂಡರ್ ಅವಧಿ ಮುಗಿಯದೇ ಇರುವ ಟ್ಯಾಂಕರ್ ಮಾರ್ಗಗಳ ವಾಹನದ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವಂತಿಲ್ಲ.**

ಇ) **ಕಹಾಮ ಘಟಕ/ಒಕ್ಕೂಟಗಳಲ್ಲಿ ಕನಿಷ್ಠ 2 ವರ್ಷಗಳ ಟ್ಯಾಂಕರ್ ಸೇವೆ ಸಲ್ಲಿಸಿರುವ ಅನುಭವದೊಂದಿಗೆ ಸೇವೆ ತೃಪ್ತಿಕರವಾಗಿರುವ ಬಗ್ಗೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಟೆಂಡರ್‌ನಲ್ಲಿ ಸಲ್ಲಿಸುವುದು.**

ಈ) **ಇನ್ಸೂಲೇಟೆಡ್ ಟ್ಯಾಂಕರ್‌ಗಳಲ್ಲಿ ಹಾಲು ಸಾಗಾಣಿಕೆ ಮಾಡುವ ಸಂಬಂಧ ನೀಡಲಾಗುವ ಎಫ್.ಎಸ್.ಎಸ್.ಎ.ಐ ಲೈಸೆನ್ಸ್ ಪ್ರತಿಯನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡತಕ್ಕದ್ದು. (Kind of Business ನಲ್ಲಿ Transport: Transporter (having a number of specialised vehicles like insulated refrigerated van/ wagon, milk tankers etc) ಎಫ್.ಎಸ್.ಎಸ್.ಎ.ಐ ಲೈಸೆನ್ಸ್ ನಲ್ಲಿ ಟ್ಯಾಂಕರ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿರಬೇಕು.**

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

ನಿಬಂಧನೆಗಳು :

1. ಟೆಕ್ನಿಕಲ್ /ಕಮರ್ಷಿಯಲ್ ಟೆಂಡರ್‌ನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಡಿ ಸಲ್ಲಿಸುವುದು.

2. ಸಲ್ಲಿಸಲ್ಪಟ್ಟ ಟೆಂಡರ್‌ಗಳಲ್ಲಿ ಟೆಕ್ನಿಕಲ್ ಟೆಂಡರ್‌ನ್ನು **ದಿ: 17.11.2023** ರಂದು ಬೆಳಿಗ್ಗೆ 11.30 ಘಂಟೆಯ ನಂತರ ತೆರೆಯಲಾಗುವುದು.

3. **ಟೆಂಡರ್ ಹಾಕಬಯಸುವ ಬಿಡ್ಡುದಾರರು ಸದರಿ ಟೆಂಡರ್ ಫಾರಂನ್ನು ಪ್ರತಿ ಮಾರ್ಗಕ್ಕೆ ಒಂದರಂತೆ ಭರ್ತಿ ಮಾಡಿ ಅನುಭಂದ-ಎ (ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಅರ್ಜಿ) ಪ್ರತ್ಯೇಕವಾಗಿ ಅಪ್‌ಲೋಡ್ ಮಾಡುವುದು.**

4. ಪ್ರತಿ ಮಾರ್ಗಕ್ಕೂ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ. ಸಲ್ಲಿಸುವುದು ಒಂದೇ ವಾಹನವುಳ್ಳವರು ಒಂದು ಮಾರ್ಗಕ್ಕಿಂತ ಹೆಚ್ಚಿನ ಮಾರ್ಗಗಳಿಗೆ ಅರ್ಜಿ ಸಲ್ಲಿಸುವಂತಿಲ್ಲ.

5. **ಕಹಾಮ ಘಟಕ/ಒಕ್ಕೂಟಗಳಲ್ಲಿ ಕನಿಷ್ಠ 2 ವರ್ಷಗಳ ಟ್ಯಾಂಕರ್ ಸೇವೆ ಸಲ್ಲಿಸಿರುವ ಅನುಭವದೊಂದಿಗೆ ಸೇವೆ ತೃಪ್ತಿಕರವಾಗಿರುವ ಬಗ್ಗೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಟೆಂಡರ್‌ನಲ್ಲಿ ಸಲ್ಲಿಸುವುದು.**

6. **ಇನ್ಸೂಲೇಟೆಡ್ ಟ್ಯಾಂಕರ್‌ಗಳಲ್ಲಿ ಹಾಲು ಸಾಗಾಣಿಕೆ ಮಾಡುವ ಸಂಬಂಧ ನೀಡಲಾಗುವ ಎಫ್.ಎಸ್.ಎಸ್.ಎ.ಐ ಲೈಸೆನ್ಸ್ ಪ್ರತಿಯನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡತಕ್ಕದ್ದು. (Kind of Business ನಲ್ಲಿ Transport: Transporter (having a number of specialised vehicles like insulated refrigerated van/ wagon, milk tankers etc) ಎಫ್.ಎಸ್.ಎಸ್.ಎ.ಐ ಲೈಸೆನ್ಸ್ ನಲ್ಲಿ ಟ್ಯಾಂಕರ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿರಬೇಕು.**

7. ಟೆಂಡರ್ ಸಲ್ಲಿಸಬಯಸುವವರು ತಮ್ಮ ಹೆಸರಿಗೆ ಸ್ವಂತ ವಾಹನ ಹೊಂದಿರಬೇಕು. ಮತ್ತು ಟೆಂಡರ್ ತೆರೆಯುವ ಸಮಯದಲ್ಲಿ, ಪರಿಶೀಲನೆಗಾಗಿ ಟೆಂಡರ್‌ನಲ್ಲಿ ಪ್ರಕಟಿಸಿರುವ ಮಾದರಿಯ/ಸಾಮರ್ಥ್ಯದ ವಾಹನಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಟೆಂಡರ್ ದಾಖಲಾತಿಗಳೊಂದಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡತಕ್ಕದ್ದು.

ಪ್ರತಿ ಮಾರ್ಗಕ್ಕೆ ನೀಡಬೇಕಾದ ಇ.ಎಂ.ಡಿ / ಭದ್ರತಾ ಠೇವಣಿ ಮತ್ತು / ಮಾರ್ಗಗಳ ವಿವರ ಮತ್ತು ಇತರೆ ನಿಬಂಧನೆಗಳ ವಿವರವಾದ ಷೆಡ್ಯೂಲ್‌ನ್ನು ಹಾಗೂ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯು ಟೆಂಡರ್ ಫಾರಂನಲ್ಲಿ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಶಿವಮೊಗ್ಗ ಹಾಲು ಒಕ್ಕೂಟದ ಕಛೇರಿ ವೇಳೆಯಲ್ಲಿ/ ಶೇಮತಾಂ ವಿಭಾಗದಿಂದ ಪಡೆಯಬಹುದು. **ದೂರವಾಣಿ : (08182) 246165**

ಸಹಿ/-
ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ
ಶಿವಮೊಗ್ಗ.

ದಿನಾಂಕ : 25.10.2023
ಸ್ಥಳ : ಶಿವಮೊಗ್ಗ ಡೇರಿ

ಅನುಭಂದ–ಎ

# ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಅರ್ಜಿ

**ಇವರಿಗೆ :**

**ವ್ಯವಸ್ಥಾಪಕ ನಿರ್ದೇಶಕರು**
**ಶಿವಮೊಗ್ಗ ಹಾಲು ಒಕ್ಕೂಟ**
**ಮಾಚೇನಹಳ್ಳಿ ನಿದಿಗೆ ಅಂಚೆ**
**ಶಿವಮೊಗ್ಗ – 577 222.**

**ಇಂದ**

**ಹೆಸರು : ................................**
**ತಂದೆಯ ಹೆಸರು :....................**
**ವಿಳಾಸ..................................**
**..........................................**
**ಪಿನ್ ಕೋಡ್ :........................**
**ಮೊಬೈಲ್ ನಂ :**
ದೂರವಾಣಿ ಸಂ:

ಸ್ವಾಮಿ,

**ವಿಷಯ :** ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ನ ದ್ವೈವಾರ್ಷಿಕ ದರ ಗುತ್ತಿಗೆ ಪಡೆಯುವ ಸಲುವಾಗಿ.

ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯ ಬಿ.ಎಂ.ಸಿ. ಕೇಂದ್ರಗಳಿಂದ ಹಾಲು ಸಾಗಾಣಿಕೆ ಮಾಡಲು, ವಿವಿಧ ಸಾಮರ್ಥ್ಯದ ಹಾಲು ಸಾಗಾಣಿಕೆ ಟ್ಯಾಂಕರ್ ವಾಹನಗಳನ್ನು ಒದಗಿಸಲು ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ನ ದ್ವೈವಾರ್ಷಿಕ ಗುತ್ತಿಗೆ ಹಾಗೂ ತಾಂತ್ರಿಕ ಟೆಂಡರ್ ಭಾಗ –1 ರ ಅರ್ಹತೆ ಪಡೆಯುವ ಸಲುವಾಗಿ ಅರ್ಜಿ ಸಲ್ಲಿಸುತ್ತಿರುವ ಬಗ್ಗೆ ನನ್ನ ದರ ನಮೂದಿಸಿ ಅಗತ್ಯವಿರುವ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಈ ಕೆಳಕಂಡಂತೆ ಸಲ್ಲಿಸುತ್ತಿದ್ದೇನೆ.

ಶ್ರೀ/ಶ್ರೀಮತಿ................................................. ಆದ ನಾನು / ನನ್ನ ಪರವಾಗಿ ಮಾರ್ಗ ಸಂಖ್ಯೆ ......................ರ.................. ಬಿ.ಎಂ.ಸಿ. ಮಾರ್ಗಕ್ಕೆ/ಮಾರ್ಗಗಳಿಗೆ ತಕ್ಕ ಸಾಮರ್ಥ್ಯದ ವಾಹನವನ್ನು ಹೊಂದಿದ್ದು, ದೃಢೀಕೃತ ದಾಖಲೆಗಳೊಂದಿಗೆ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ನ ಕಾನೂನಿಗೆ ಒಳಪಟ್ಟು, ಟೆಂಡರ್‌ನಲ್ಲಿ ಭಾಗವಹಿಸಲು ದಾಖಲೆಗಳನ್ನು ಲಗತ್ತಿಸಿರುತ್ತೇನೆ.

ನಾನು ಟೆಂಡರ್ ಪ್ರಕಟಣೆಯಲ್ಲಿ ತಿಳಿಸಿರುವ ಸೂಚನೆಗಳು ನಿಯಮ ಮತ್ತು ನಿಬಂಧನೆಗೊಳಪಟ್ಟು ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಗುತ್ತಿಗೆಯಲ್ಲಿ ಭಾಗವಹಿಸುತ್ತಿದ್ದೇನೆ. ನನಗೆ ಟೆಂಡರ್ ಒಪ್ಪಿಗೆಯಾದಲ್ಲಿ ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಿರುವ ಸಾಮರ್ಥ್ಯದ ಮತ್ತು ಮಾದರಿಯ ವಾಹನವನ್ನು ಹೊಂದಿದ್ದು ಒದಗಿಸಲು ಬದ್ಧನಾಗಿರುತ್ತೇನೆ. ಮತ್ತು ಹಾಲು ಸಾಗಾಣಿಕೆ ಟ್ಯಾಂಕರ್ ವಾಹನಕ್ಕೆ FSSAI ನೊಂದಣಿ/ಲೈಸನ್ಸ್ ಮಾಡಿಸಲು ಮತ್ತು ಜಿ.ಪಿ.ಎಸ್. ಅಳವಡಿಸಲು/ಅಳವಡಿಸಿಕೊಳ್ಳಲು ಬದ್ಧನಾಗಿರುತ್ತೇನೆ.

ನನಗೆ ತಿಳಿದ ಮಟ್ಟಿಗೆ ಟೆಂಡರ್ ಸಮಿತಿಯು ಅರ್ಜಿಯನ್ನು ಯಾವುದೇ ಸೂಚನೆ ನೀಡದೆ ಅಂಗೀಕರಿಸುವ ಮತ್ತು ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತದೆ.

ವಾಣಿಜ್ಯ ಟೆಂಡರ್ ಭಾಗ–2ನ್ನು ತೆರೆದ ದಿನದಿಂದ 60 ದಿನಗಳ ಕಾಲ ನನ್ನ ಟೆಂಡರ್ / ದರ ನೀಡಿಕೆ ಊರ್ಜಿತಾವಸ್ತೆಯಲ್ಲಿಡಲು ಒಪ್ಪಿರುತ್ತೇನೆ.

**ಮಾರ್ಗದ ಹೆಸರು :**

**ಟೆಂಡರ್‌ದಾರರ ಸಹಿ ಮತ್ತು ಹೆಸರು**

(ದಪ್ಪ ಅಕ್ಷರಗಳಲ್ಲಿ)

# ಅನುಬಂಧ – ಬಿ

## ದರಪಟ್ಟಿ ಸಲ್ಲಿಸಲು ನಿಯಮ ನಿಬಂಧನೆಗಳು

### 1.0 ಸಾಗಾಣಿಕೆ ಗುತ್ತಿಗೆ ವ್ಯಾಪ್ತಿ :

1.1 ಬಿ.ಎಂ.ಸಿ. ಹಾಲು ಶೇಖರಣೆ ಮಾರ್ಗಕ್ಕೆ ವಾಹನ ಒದಗಿಸುವುದಾಗಿ ಸಾರಿಗೆ ಗುತ್ತಿಗೆ ಪಡೆಯುವ ಟ್ಯಾಂಕರ್ ವಾಹನ ಮಾಲೀಕರು ಒಕ್ಕೂಟದಿಂದ ನೀಡುವ ವೇಳಾಪಟ್ಟಿಯಂತೆ ಬೆಳಿಗ್ಗೆ ಮತ್ತು ಸಂಜೆ ಎರಡು ಸರತಿಗಳಲ್ಲಿ ಅಥವಾ ಒಕ್ಕೂಟದಿಂದ ನೀಡುವ ವೇಳಾಪಟ್ಟಿಯಂತೆ ಬೆಳಿಗ್ಗೆ ಅಥವಾ ಸಂಜೆ ಸರತಿಯಲ್ಲಿ ಬಿ.ಎಂ.ಸಿ. ಕೇಂದ್ರದವರು ನೀಡುವ ಶೀಥಲಿಕರಿಸಿದ ಹಾಲನ್ನು ಇನ್ಸುಲೇಟೆಡ್ ಬಾಡಿಯಿರುವ ಹಾಲಿನ ಟ್ಯಾಂಕರ್‌ಗೆ ಏರಿಸಿಕೊಂಡು  ಸೂಚಿಸಿದ ಸಮಯದೊಳಗಾಗಿ ಶೀತಲೀಕರಣ/ಡೇರಿಗೆ ಸಾಗಾಣಿಕೆ ಮಾಡತಕ್ಕದ್ದು, ಬಿ.ಎಂ.ಸಿ. ಕೇಂದ್ರದಲ್ಲಿನ ಶೀಥಲಿಕರಿಸಿದ ಹಾಲನ್ನು ಬಿ.ಎಂ.ಸಿ. ಟ್ಯಾಂಕರ್‌ಗಳಿಗೆ ಏರಿಸುವ/ಭರ್ತಿ ಮಾಡಿಕೊಳ್ಳುವ ಮುನ್ನ ಹಾಲಿನ ಗುಣಮಟ್ಟ ಪರೀಕ್ಷಿಸಿಕೊಂಡು ಹಾಲಿನ ತೂಕವನ್ನು ಬಿ.ಎಂ.ಸಿ. ಕೇಂದ್ರದವರು ನೀಡುವ ಡಿಸ್‌ಪ್ಯಾಚ್ ಚಲನ್ ಅಥವಾ ಡೆಲವರಿ ನೋಟ್‌ನೊಂದಿಗೆ ಖಾತ್ರಿ ಪಡಿಸಿಕೊಳ್ಳುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಹಾಗೂ ಡೇರಿ/ಶೀಥಲೀಕರಣ ಕೇಂದ್ರದಿಂದ ಹೊರಗೆ ಹೋಗುವ ಮುನ್ನ ಟ್ರಕ್/ಟ್ರೀಪ್ ಶೀಟ್ ಪಡೆದು ಅಥವಾ ಸಂಬಂಧಿಸಿದ ವಿಭಾಗದಲ್ಲಿ ನೀಡುವ ಔಟ್ ಪಾಸ್ (Out Pass) ಪಡೆದು ಭದ್ರತಾ ವಿಭಾಗದಲ್ಲಿ ದಾಖಲಿಸಿ ಡೇರಿ/ಶೀತಲೀಕರಣ ಕೇಂದ್ರದ ಹೊರಗೆ ಹೋಗತಕ್ಕದ್ದು.

1.2 ಗುತ್ತಿಗೆದಾರರು ಃ ಸಾಗಾಣಿಕೆದಾರರು, ಶೀಥಲಿಕರಿಸಿದ ಹಾಲನ್ನು ನಿಗದಿತ ಬಿ.ಎಂ.ಸಿ. ಕೇಂದ್ರಗಳಿಂದ ಡೇರಿಗೆ ಅಥವಾ ಸೂಚಿಸಿದ ಶೀತಲೀಕರಣ ಕೇಂದ್ರಕ್ಕೆ ಸಾಗಾಣಿಕೆ ಮಾಡಿ, ಅವನಿಗೆ /ಅವಳಿಗೆ ಒಪ್ಪಿಸಿರುವ ಮಾರ್ಗದಲ್ಲಿನ ಡೇರಿ/ಶೀತಲೀಕರಣ ಕೇಂದ್ರಕ್ಕೆ ಬೆಳಿಗ್ಗೆ ಹಾಗೂ ಮದ್ಯಾಹ್ನ ಎರಡೂ ವೇಳೆಗಳಲ್ಲಿ ಅಥವಾ ಹಾಲು ಉತ್ಪಾದನಾ ಘಟಕ (ಡೇರಿ) ನಿಗದಿಪಡಿಸಿರುವ ವೇಳಾ ಪಟ್ಟಿಯಂತೆ ಸಾಗಾಣಿಕೆ ಮಾಡತಕ್ಕದ್ದು. ಹಾಲನ್ನು ಬಿ.ಎಂ.ಸಿ. ಕೇಂದ್ರದಿಂದ ನೀಡುವ ಗೇಟ್‌ಪಾಸ್/ಡೆಲಿವರಿ ನೋಟ್ ಪ್ರಕಾರವೇ ಸಂಬಂಧಿಸಿದ ಡೇರಿ/ಶೀತಲಿಕರಣ ಕೇಂದ್ರಕ್ಕೆ ಸಾಗಾಣಿಕೆ ಮಾಡುವುದು. ಯಾವುದೇ ಕಾರಣಕ್ಕೂ ಇದನ್ನು ಬದಲಾವಣೆ ಮಾಡವುದಾಗಲಿ/ತಿದ್ದುವುದಾಗಲಿ ಮಾಡತಕ್ಕದ್ದಲ್ಲ.

1.3 ಬಿ.ಎಂ.ಸಿ. ಕೇಂದ್ರದಲ್ಲಿ ಸಂಗ್ರಹಿಸಿದ ಹಾಲನ್ನು ಡೇರಿ/ಶೀತಲೀಕರಣ ಕೇಂದ್ರದಲ್ಲಿ ಅನ್‌ಲೋಡ್ ಮಾಡಿದ ನಂತರ ಡೇರಿಯಿಂದ ಹೊರಗೆ ಹೋಗಲು ಡೇರಿಯ/ಶೀತಲೀಕರಣ ಕೇಂದ್ರಗಳ ಅಥವಾ ಸಂಬಂಧಿಸಿದ ವಿಭಾಗದಿಂದ ಅಧಿಕೃತ ಅನುಮತಿ (ಔಟ್ ಪಾಸ್) ಪಡೆಯತಕ್ಕದ್ದು.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

1.4 ಬಿ.ಎಂ.ಸಿ. ಕೇಂದ್ರದ ನಿಗದಿತ ಸ್ಥಳದಿಂದ ಹಾಲು ಪಡೆದುಕೊಳ್ಳುವ ಸಂದರ್ಭದಲ್ಲಿ ಗುತ್ತಿಗೆದಾರರು ಅಥವಾ ಗುತ್ತಿಗೆದಾರರಿಂದ ಅಧಿಕೃತವಾಗಿ ನೇಮಿಸಲ್ಪಟ್ಟಿರುವ ಪ್ರತಿನಿಧಿಗಳು, ಹಾಲಿನ ಉಷ್ಣತೆ, ಗುಣಮಟ್ಟ ಮತ್ತು ಅಳತೆ ಪರೀಕ್ಷಿಸಿಕೊಂಡು ನಂತರ ಹಾಲನ್ನು ಟ್ಯಾಂಕರ್‌ಗೆ ಭರ್ತಿ ಮಾಡಿಕೊಂಡು ಸೂಚಿತ ಕೇಂದ್ರಗಳಿಗೆ, ಯಾವುದೇ ವ್ಯತ್ಯಾಯವಾಗದಂತೆ ಸಾಗಾಣಿಕೆ ಮಾಡತಕ್ಕದ್ದು. ತಪ್ಪಿದಲ್ಲಿ ಅಂತಹ ನಷ್ಟಕ್ಕೆ ಗುತ್ತಿಗೆದಾರರನ್ನೇ ಜವಾಬ್ದಾರರನ್ನಾಗಿ ಮಾಡಿ ಅವರ ಸಾಗಾಣಿಕೆ ಬಿಲ್ಲಿನಲ್ಲಿ ಒಕೂಟಕ್ಕೆ ಆದ ನಷ್ಟದ ಮೊತ್ತವನ್ನು ವಸೂಲಿ ಮಾಡಲಾಗುವುದು.

2.0 **ಅರ್ಹತೆಗಳು :**

2.1 ನಿಗಧಿತ ಸಾಮರ್ಥ್ಯದ ಹಾಲಿನ ಟ್ಯಾಂಕರ್‌ಗಳನ್ನು ಹೊಂದಿರುವ ಎಲ್ಲಾ ಅರ್ಜಿ ಮೂಲಗಳವರಿಗೂ ದರಪಟ್ಟಿ ದಸ್ತಾವೇಜು ಸಲ್ಲಿಸಲು ಮುಕ್ತ ಅವಕಾಶ ಕಲ್ಪಿಸಲಾಗಿದೆ.

2.2 ಗುತ್ತಿಗೆ ಪಡೆದುಕೊಳ್ಳಲು ಅರ್ಹರಾಗಬೇಕಾದರೆ ಪರಿಣಾಮಕಾರಿಯಾಗಿ ಕೆಲಸ/ ಕಾರ್ಯ ನಿರ್ವಹಿಸಲು ಬೇಕಾದ ಸಾಮರ್ಥ್ಯ ಅಗತ್ಯ ಸಂಪನ್ಮೂಲಗಳಿರುವುದರ ಬಗ್ಗೆ ದಾಖಲೆ, ಪುರಾವೆಗಳನ್ನು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಒದಗಿಸತಕ್ಕದ್ದು. ಈ ಕಾರಣದಿಂದಾಗಿ ದರಪಟ್ಟಿ, ದಸ್ತಾವೇಜು ಸಲ್ಲಿಸುವುದರ ಪ್ರಸ್ತಾವನೆಗಳಲ್ಲಿ ಕೆಳಗೆ ನಮೂದಿಸಿರುವ ಮಾಹಿತಿಗಳನ್ನು ಪೂರೈಕೆ ಮಾಡತಕ್ಕದ್ದು.

ಅ) ಕಾಮಗಾರಿಗೆ ದರಪಟ್ಟಿ : ದಸ್ತಾವೇಜು ಸಲ್ಲಿಸುವವರು ಹಾಲಿ ವಾಹನ ಹೊಂದಿದ್ದು, ಸಾಗಾಣಿಕೆಗೆ ಬಳಸುವ ವಾಹನದ ಆರ್.ಸಿ. ಪುಸ್ತಕದ ನಕಲು ಪ್ರತಿ, ಎಫ್.ಸಿ., ವಿಮೆ, ಪರಮಿಟ್, ಸಾಮರ್ಥ್ಯ, ಟ್ಯಾಕ್ಸ್ ಕಾರ್ಡ್, ಎಮಿಷನ್ ಪ್ರಮಾಣ ಪತ್ರ ಮತ್ತು ಸಂಬಂಧಪಟ್ಟ ಅಗತ್ಯ ದಾಖಲೆಗಳನ್ನು ಟೆಕ್ನಿಕಲ್ ಟೆಂಡರ್‌ನೊಂದಿಗೆ ದಾಖಲೆಗಳನ್ನು ದರಪಟ್ಟಿ – ದಸ್ತಾವೇಜಿನೊಂದಿಗೆ ಲಗತ್ತಿಸತಕ್ಕದ್ದು.

ಆ) ಕ್ರ.ಸಂ 1 ರ ಹಾಲು ಸಾಗಾಣಿಕೆ ಟ್ಯಾಂಕರ್ ಮಾರ್ಗಕ್ಕೆ ಪ್ರಕಟಿಸಿದಂತೆ **ನಿಗದಿತ ಸಾಮರ್ಥ್ಯದ ಎಸ್.ಎಸ್. ಇನ್ಸೂಲೆಟೆಡ್ ಹಾಲಿನ ಟ್ಯಾಂಕರ್** <u>ವಾಹನ ಹೊಂದಿದವರು ಮಾತ್ರ</u> (ಆರ್.ಸಿ. ಪುಸ್ತಕದಲ್ಲಿ ಹಾಲಿನ ಟ್ಯಾಂಕರ್ ಮತ್ತು ಸಾಮರ್ಥ್ಯ ದಾಖಲಾಗಿರಬೇಕು) ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ. ವಾಹನಕ್ಕೆ ಸಂಬಂಧಿಸಿದ **<u>B-extract report from the RTO, Upadated RC book including Fitness Certificate, Permit, Insurance, Ownership, Emmission test, Capacity of tanker as per RC book details</u>** ಮುಂತಾದ ಎಲ್ಲಾ ನವೀಕರಣ ದಾಖಲಾತಿಗಳನ್ನು ಅಥವಾ ಸಾರಿಗೆ ಇಲಾಖೆಯಿಂದ ಪಡೆದ ವಾಹನದ ಬಿ.ಎಕ್ಸಾಟ್ರ್ಯಾಕ್ಟ್ ರಿಪೋರ್ಟ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ. **<u>ಒಕ್ಕೂಟದ ವ್ಯಾಪ್ತಿಯಲ್ಲಿ ಮೇಲೆ ತಿಳಿಸಿರುವ ಮಾರ್ಗಗಳಲ್ಲಿ ಹಾಲಿ ಚಲಿಸುತ್ತಿರುವ ಟ್ಯಾಂಕರ್‌ಗಳನ್ನು ಹೊರತುಪಡಿಸಿ ಟೆಂಡರ್ ಅವಧಿ ಮುಗಿಯದೇ ಇರುವ ಟ್ಯಾಂಕರ್ ಮಾರ್ಗಗಳ ವಾಹನದ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವಂತಿಲ್ಲ.</u>**

ಇ) ಹಾಲು ಸಾಗಾಣಿಕಾ ಟ್ಯಾಂಕರ್‌ಗಳು ಸುಸ್ಥಿತಿಯಲ್ಲಿದ್ದು, ಎಸ್.ಎಸ್.ಇನ್ಸೂಲೇಟೆಡ್ ಬಾಡಿ ಹೊಂದಿರಬೇಕು ಮತ್ತು ಯಾವುದೇ ಡ್ಯಾಮೇಜ್ ಇರಬಾರದು. 2011 ರ ಅಥವಾ ನಂತರದ ಮಾಡೆಲ್ ಆಗಿರಬೇಕು.

ಈ) ಟೆಂಡರ್ ಸಲ್ಲಿಸುವವರ ಹೆಸರಿಗೆ ವಾಹನದ ದಾಖಲಾತಿಗಳಿರಬೇಕು. ವಾಹನ ದಾಖಲಾತಿಗಳನ್ನು ಕಡ್ಡಾಯವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡತಕ್ಕದ್ದು. ವಾಹನ ದಾಖಲಾತಿಗಳನ್ನು ಅಪ್‌ಲೋಡ್ ಮಾಡದಿದ್ದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

ಟೆಂಡರ್‌ದಾರರ ಸಹಿ ಮತ್ತು ಹೆಸರು

(ದಪ್ಪ ಅಕ್ಷರಗಳಲ್ಲಿ)

**3.0 ದರಪಟ್ಟಿ – ದಸ್ತಾವೇಜು ಸಲ್ಲಿಕೆ ವೆಚ್ಚ :**

3.1 ದರಪಟ್ಟಿ – ದಸ್ತಾವೇಜು ಸಲ್ಲಿಕೆಗೆ ಸಂಬಂಧಿಸಿದಂತೆ ಪೂರ್ವಭಾವಿ ಸಿದ್ಧತೆ, ಪ್ರಸ್ತಾವನೆ ಸಿದ್ಧಪಡಿಸುವುದು ಇವೇ ಮುಂತಾದುವಕ್ಕೆ ತಗಲುಬಹುದಾದ ಎಲ್ಲಾ ವೆಚ್ಚವನ್ನು ದರಪಟ್ಟಿ – ದಸ್ತಾವೇಜು ಸಲ್ಲಿಕೆದಾರರೇ ಭರಿಸತಕ್ಕದ್ದು ದರಪಟ್ಟಿ – ದಸ್ತಾವೇಜು ಸಲ್ಲಿಕೆ ಪ್ರಕ್ರಿಯೆ, ನಿರ್ವಹಣೆ ಹಾಗೂ ಫಲಿತಾಂಶದ ಪರಿಣಾಮಕ್ಕೆ ಸಂಬಂಧಿಸಿದಂತೆ, ಶಿವಮೊಗ್ಗ ಹಾಲು ಒಕ್ಕೂಟವು ಯಾವುದೇ ಕಾರಣಕ್ಕೂ ಜವಾಬ್ದಾರರಲ್ಲ.

**4.0 ಮಾರ್ಗ ಪರಿಶೀಲನೆಗೆ ಭೇಟಿ :**

4.1 ಗುತ್ತಿಗೆದಾರರು ಹಾಲಿನ ಶೇಖರಣೆಯು ಹೆಚ್ಚಾಗಿದ್ದಾಗ ಅಥವಾ ಹಾಲಿನ ಸುಗ್ಗಿ ಕಾಲದಲ್ಲಿ ಬೇಡಿಕೆಯಿದ್ದಾಗ ಶಿವಮೊಗ್ಗ ಹಾಲು ಒಕ್ಕೂಟವು ಸೂಚಿಸಿದಂತೆ ಟ್ಯಾಂಕರ್ ಮೂಲಕ ಹಾಲು ಸಾಗಾಣಿಕೆ ಮಾಡಲು ಬದ್ಧರಿರಬೇಕು.

4.2 ದರಪಟ್ಟಿ – ದಸ್ತಾವೇಜು ಸಲ್ಲಿಸುವವರು, ತಾವು ಹಾಲು ಸಂಗ್ರಹಣೆ ಮಾಡಬೇಕಾಗಿರುವ ಮಾರ್ಗವನ್ನು ಪರಿಶೀಲಿಸಲು, ವೈಯಕ್ತಿಕ ಜವಾಬ್ದಾರಿಯ ಮೇಲೆ ಭೇಟಿ ನೀಡಿ ಹಾಲು ಸಾಗಾಣಿಕೆ ಮಾರ್ಗದ ಅಧ್ಯಯನ ನಡೆಸತಕ್ಕದ್ದು, ದೊರೆಯುವ ಎಲ್ಲಾ ಮಾಹಿತಿಯನ್ನು, ರಸ್ತೆಯ ಗುಣಮಟ್ಟವನ್ನು ಗಮನದಲ್ಲಿರಿಸಿಕೊಂಡು ಅದರ ಆಧಾರದ ಮೇಲೆಯೇ ದರಪಟ್ಟಿ – ದಸ್ತಾವೇಜು ಸಿದ್ಧಪಡಿಸತಕ್ಕದ್ದು ಹಾಗೂ ಗುತ್ತಿಗೆದಾರನಾಗಿ ಪ್ರವೇಶ ಪಡೆಯತಕ್ಕದ್ದು.

**5.0 ದರಪಟ್ಟಿ – ದಸ್ತಾವೇಜು ನಿರ್ದೇಶನಗಳು :**

5.1 ದರಪಟ್ಟಿ – ದಸ್ತಾವೇಜುದಾರರು ತಾವು ಸಲ್ಲಿಸಬೇಕಾಗಿರುವ ದರಪಟ್ಟಿ – ದಸ್ತಾವೇಜು ಕುರಿತಂತೆ ನಿರ್ದೇಶಿಸಲಾಗಿರುವ ಎಲ್ಲಾ ನಿಯಮ ನಿಬಂಧನೆಗಳನ್ನು ಎಚ್ಚರಿಕೆಯಿಂದ ಪರೀಕ್ಷಿಸತಕ್ಕದ್ದು, ದರಪಟ್ಟಿ – ದಸ್ತಾವೇಜು ಸಲ್ಲಿಸಲು ಅಗತ್ಯವಾದ ಎಲ್ಲಾ ಅಧಿಕೃತ ಮಾಹಿತಿಗಳು, ದಾಖಲೆಗಳು ದರಪಟ್ಟಿ – ದಸ್ತಾವೇಜಿನೊಂದಿಗೆ ಲಗತ್ತಿಸತಕ್ಕದ್ದು ಹಾಗಲ್ಲದೆ ಪೂರ್ಣ ಮಾಹಿತಿ ನೀಡುವಲ್ಲಿ ವಿಫಲವಾದರೆ ದರಪಟ್ಟಿ – ದಸ್ತಾವೇಜನ್ನು ತಿರಸ್ಕರಿಸಲಾಗುತ್ತದೆ.

**6.0 ದರಪಟ್ಟಿ – ದಸ್ತಾವೇಜು ಸಲ್ಲಿಕೆ ಬೆಲೆ :**

6.1 ದರಪಟ್ಟಿ ಆಹ್ವಾನಿಸಿದ ಸಂದರ್ಭದಲ್ಲಿ ನಿಖರವಾಗಿ ಸೂಚಿಸಲಾಗಿರುವ ನಿಯಮ ನಿಬಂಧನೆಯಂತೆ ದರಪಟ್ಟಿ – ದಸ್ತಾವೇಜಿನ ಪರಿಶಿಷ್ಟ ಗುತ್ತಿಗೆಯ ಪೂರ್ಣ ಅವಧಿಗೆ ಹೊಂದಿರುವುದನ್ನು ದರಪಟ್ಟಿ – ದಸ್ತಾವೇಜುದಾರರು ಸ್ಪಷ್ಟ ಮಾತಿನಿಂದ ದರಪಟ್ಟಿ – ದಸ್ತಾವೇಜಿನಲ್ಲಿ ಖಚಿತವಾಗಿ ದಾಖಲಿಸತಕ್ಕದ್ದು, ಹಾಗಲ್ಲದೆ ಬೇರೆ ರೀತಿ ಇರತಕ್ಕದ್ದಲ್ಲ.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

**7.0 ನಿಗದಿತ ದರ :**

7.1 ದಾಖಲೆಗೊಂಡ ದರ : ದರಪಟ್ಟಿ – ದಸ್ತಾವೇಜುದಾರನೊಂದಿಗೆ ಸಂಧಾನಗೊಂಡ ನಿಗದಿತ ದರ, ಗುತ್ತಿಗೆಯ ಪೂರ್ಣ ಅವಧಿಯಲ್ಲಿ ಜಾರಿಯಲ್ಲಿರತಕ್ಕದ್ದು, ಯಾವುದೇ ಕಾರಣಕ್ಕಾಗಿ ಯಾವುದೇ ಬಾಬ್ತಿನಲ್ಲಿ ಹೆಚ್ಚಳ ಆಗುವುದಕ್ಕೆ ಅವಕಾಶ ಇರುವುದಿಲ್ಲ ಹಾಗೂ ಅಂತಹ ವ್ಯತ್ಯಯವನ್ನು ಪರಿಗಣಸದೆ ಜೊತೆಗೆ ತಿರಸ್ಕರಿಸಲಾಗುವುದು. ಕೆಲವು ವಿಶೇಷ ಸಂದರ್ಭಗಳಲ್ಲಿ ನಿಗದಿತ ದರವನ್ನು ಪರಿಷ್ಕರಿಸಲು ಗುತ್ತಿಗೆದಾರರು ಮನವಿ ನೀಡಿದಲ್ಲಿ ಸದರಿ ಮನವಿಯನ್ನು ಸಂದರ್ಭಕ್ಕನುಗುಣವಾಗಿ ಪರಿಗಣಿಸಬಹುದಾಗಿದೆ. ಆದರೆ ಈ ವಿಷಯದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.

7.2 ಗುತ್ತಿಗೆದಾರರು ನಮೂದಿಸುವ ದರವು ಎಲ್ಲಾ ತೆರಿಗೆಗಳನ್ನು ರಾಜ್ಯ/ಕೇಂದ್ರ ಸರ್ಕಾರದ ಟೋಲ್ ಫೀ (ರಾಜ್ಯ/ರಾಷ್ಟ್ರೀಯ ಹೆದ್ದಾರಿ ಶುಲ್ಕ), ವೃತ್ತಿ ತೆರಿಗೆ, ಮುಂತಾದವುಗಳನ್ನು ಒಳಗೊಂಡಿರಬೇಕು.

**8.0 ದರಪಟ್ಟಿ – ದಸ್ತಾವೇಜಿನ ಸಿಂಧುತ್ವ :**

8.1 ದರಪಟ್ಟಿ – ದಸ್ತಾವೇಜಿನ ಸಲ್ಲಿಕೆ, ಅಂಗೀಕಾರಗೊಂಡಿರುವ ರೀತ್ಯಾ ದರಪಟ್ಟಿ ತೆರೆಯುವ ಪ್ರಕ್ರಿಯೆಯ ದಿನಾಂಕದಿಂದ 60 ದಿನಗಳು ಮಾತ್ರ ಅದರ ಸಿಂಧುತ್ವ ಊರ್ಜಿತವಾಗಿರುತ್ತದೆ.

8.2 ಕೆಲವಾರು ಅನಿವಾರ್ಯ ಪರಿಸ್ಥಿತಿಯಲ್ಲಿ ಮಾತ್ರ ದರಪಟ್ಟಿ – ದಸ್ತಾವೇಜಿನ ಸಿಂಧುತ್ವ ಅವಧಿ ಮುಕ್ತಾಯಗೊಳ್ಳುವ ಮುನ್ನ ಶಿವಮೊಗ್ಗ ಹಾಲು ಒಕ್ಕೂಟವು ದರ ಪಟ್ಟಿದಾರರನ್ನು ನಿಗದಿತ ಸಿಂಧುತ್ವ ಅವಧಿಯನ್ನು ವಿಸ್ತರಿಸಬಹುದಾಗಿದೆ. ವಿಸ್ತರಣೆ ಕೋರಿಕೆಯನ್ನು ಬರವಣಿಗೆಯಲ್ಲಿ ಅಥವಾ ದೂರವಾಣಿ ಸಂಪರ್ಕದ ಮೂಲಕ ಮಾಡಬಹುದಾಗಿದೆ. ಆದರೆ ದರಪಟ್ಟಿ – ದಸ್ತಾವೇಜು ಸಲ್ಲಿಕೆ ಸಂದರ್ಭದಲ್ಲಿ ಒದಗಿಸಲಾಗಿದ್ದ ಆಧಾರ ನೀಡಿಕೆಯನ್ನು (ಭದ್ರತಾ ಠೇವಣಿಯನ್ನು) ಅದಕ್ಕನುಗುಣವಾಗಿ ವಿಸ್ತರಿಸಲು ಗುತ್ತಿಗೆದಾರರಿಗೆ ತಿಳಿಸಬಹುದಾಗಿರುತ್ತದೆ.

**9.0 ದರಪಟ್ಟಿ – ದಸ್ತಾವೇಜು ಸಲ್ಲಿಕೆಗೆ ಆಧಾರ ನೀಡಿಕೆ :**

9.1 ದರಪಟ್ಟಿದಾರ ದರಪಟ್ಟಿ – ದಸ್ತಾವೇಜು ಸಲ್ಲಿಕೆ ನಿಯಮದಡಿ ಸಾಗಾಣಿಕೆಗೆ ಅವುಗಳ ಮುಂದೆ ಸೂಚಿಸಿರುವಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಿಯಮವಳಿಯಂತೆ ಆಧಾರ ನೀಡಿಕೆ (ಇ.ಎಂ.ಡಿ.) ಒದಗಿಸತಕ್ಕದ್ದು. ಇ.ಎಂ.ಡಿ.ಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಿಯಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಸಲ್ಲಿಸಿದ ಟೆಂಡರ್‌ಗಳನ್ನು ತಿರಸ್ಕರಿಸುವುದು.

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

9.2 ಆಧಾರ ನೀಡಿಕೆ ಮೊತ್ತವನ್ನು (ಇ.ಎಂ.ಡಿ.ಮೊತ್ತವನ್ನು) ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಿಯಾಮವಳಿಯಂತೆ ಸಲ್ಲಿಸುವುದು.

9.3 ದರಪಟ್ಟಿ – ದಸ್ತಾವೇಜುದಾರ ಪ್ರತಿ ಮಾರ್ಗದ ಸಾಗಾಣಿಕೆ ಟೆಂಡರ್‌ಗಳಿಗೂ ಪ್ರತ್ಯೇಕ ದರಪಟ್ಟಿ – ದಸ್ತಾವೇಜು ಸಲ್ಲಿಸತಕ್ಕದ್ದು.

9.4 ಯಾವುದೇ ದರಪಟ್ಟಿ ಸಲ್ಲಿಕೆಯ ಜೊತೆ ನಿಗಧಿತ ಆಧಾರ (ಇ.ಎಂ.ಡಿ.) ನೀಡಿಕೆ ಇರದಿದ್ದರೆ ಅಥವಾ ನಿಗದಿತ ಮೊತ್ತಕ್ಕಿಂತ ಕಡಿಮೆ ಇದ್ದರೆ ಅಂತಹ ದರಪಟ್ಟಿ – ದಸ್ತಾವೇಜನ್ನು ಶಿವಮೊಗ್ಗ ಹಾಲು ಒಕ್ಕೂಟವು ತಿರಸ್ಕರಿಸುತ್ತದೆ.

9.5 ಅಂಗೀಕಾರ ಆಗದ ದರಪಟ್ಟಿದಾರರಿಗೆ ಅವರು ಸಲ್ಲಿಸಿರುವ ಆಧಾರ (ಇ.ಎಂ.ಡಿ.) ಮೊತ್ತವನ್ನು ಆದಷ್ಟು ಶೀಘ್ರವಾಗಿ ಪ್ರಾಮಾಣಿಕವಾಗಿ ಹಿಂತಿರುಗಿಸಲಾಗುವುದು. ಅಂದರೆ ಅದು ನಮ್ಮ ದಸ್ತಾವೇಜಿನಲ್ಲಿ ಪ್ರಕಟಿಸಿರುವಂತೆ ದರಪಟ್ಟಿಯ ಸಿಂಧುತ್ವದ ನಿಗದಿತ ಅವಧಿಯ ನಂತರದ 30 ದಿನಗಳೊಳಗಾಗಿ

9.6 ಅಂಗೀಕಾರ ಆಗುವ ದರಪಟ್ಟಿದಾರರಿಗೆ, ಅವರು ಸಲ್ಲಿಸಿರುವ ಆಧಾರ ಮೊತ್ತವನ್ನು ಒಪ್ಪಂದಕ್ಕೆ ಸಹಿ ಹಾಕಿದಾಗ ಹಾಗೂ ಅಗತ್ಯವಾದ ಕಾರ್ಯ ನಿರ್ವಹಣಾ ಪ್ರಮಾಣ ಪತ್ರವನ್ನು ಒದಗಿಸಿದಾಗ ಹಿಂತಿರುಗಿಸಲಾಗುವುದು.

9.7 ದರಪಟ್ಟಿದಾರ ಸಲ್ಲಿಸಿರುವ ಇ.ಎಂ.ಡಿ./ಆಧಾರ ಮೊತ್ತಕ್ಕೆ ಬಡ್ಡಿಯನ್ನು ಶಿವಮೊಗ್ಗ ಹಾಲು ಒಕ್ಕೂಟ ಪಾವತಿಸುವುದಿಲ್ಲ.

10.0 ದರಪಟ್ಟಿದಾರ ಸಲ್ಲಿಸುವ ಇ.ಎಂ.ಡಿ./ಆಧಾರ ಮೊತ್ತವನ್ನು ಕೆಳಕಂಡ ಸಂಧರ್ಭಗಳಲ್ಲಿ ಮುಟ್ಟುಗೋಲು ಹಾಕಿಕೊಳ್ಳಬಹುದು.

10.1 ದರಪಟ್ಟಿ ಸಲ್ಲಿಕೆ ಸಿಂಧುತ್ವದ ಅವಧಿಯಲ್ಲಿ ತನ್ನ ದರಪಟ್ಟಿಯನ್ನು ಹಿಂದಕ್ಕೆ ಪಡೆದಿದ್ದೇ ಆದರೆ

10.2 ಅಂಗೀಕಾರ ಆದ ಕಾರಣ ದರಪಟ್ಟಿದಾರನು ನಿಗದಿತ ಕಾಲಾವಧಿಯಲ್ಲಿ

ಅ) ಠೇವಣಿ ಹಣ ಪಾವತಿಸಿ ಒಪ್ಪಂದಕ್ಕೆ ಸಹಿ ಮಾಡದೇ ಇದ್ದರೆ

**ಅಥವಾ**

ಉ) ಅಗತ್ಯ ಕಾರ್ಯ ನಿರ್ವಹಣಾ ಭರವಸಾ ಪತ್ರ ನೀಡದಿದ್ದರೆ ಅಥವಾ ನಿಗಧಿತ ಅವಧಿಯೊಳಗೆ ನಿಗಧಿಪಡಿಸಿದ ಸಾಮರ್ಥ್ಯದ ವಾಹನ ಒದಗಿಸದಿದ್ದರೆ,

**11.0 ದಸ್ತಾವೇಜು ಮಾದರಿ ಹಾಗೂ ದರಪಟ್ಟಿಗೆ ಸಹಿ ಮಾಡುವುದು :**

11.1 ದರಪಟ್ಟಿ ಸಲ್ಲಿಕೆಗೆ ಸಂಬಂಧಿಸಿದಂತೆ ತಾನು ಖರೀದಿಸಿದ ದಸ್ತಾವೇಜು ಮಾದರಿ, ಅದನ್ನು ಸಿದ್ದಪಡಿಸಿ ಅಧಿಕೃತ ಮೂಲ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವುದು.

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

11.2 ದರಪಟ್ಟಿ ಸಲ್ಲಿಕೆಗೆ ಸಂಬಂಧಿಸಿದ ದಸ್ತಾವೇಜಿನ ಎಲ್ಲಾ ಪುಟಗಳಲ್ಲಿ ಅಧಿಕೃತವಾಗಿ ನಾಮ ನಿರ್ದೇಶನಗೊಂಡ ಗುತ್ತಿಗೆ ವ್ಯಕ್ತಿ ಸಹಿ ಮಾಡತಕ್ಕದ್ದು, ದಸ್ತಾವೇಜಿನ ಎಲ್ಲಾ ಪುಟಗಳಲ್ಲಿ ಹಾಗೂ ತಿದ್ದುಪಡಿ ಮಾಡಿದ ಕಡೆಗಳೆಲ್ಲೆಲ್ಲಾ ಭರ್ತಿಮಾಡಿದ ವ್ಯಕ್ತಿ ಅಥವಾ ನಾಮನಿರ್ದೇಶನಗೊಂಡ ವ್ಯಕ್ತಿ ಆತನ ಹೆಸರಿನ ಅಧ್ಯ–ಅಕ್ಷರದಲ್ಲಿ ಸಹಿಯನ್ನು ಹೆಚ್ಚುವರಿಯಾಗಿ ಮಾಡತಕ್ಕದ್ದು.

11.3 ದರಪಟ್ಟಿಯ ಪೂರ್ಣ ದಸ್ತಾವೇಜಿನಲ್ಲಿ ಯಾವುದೇ ಬದಲಾವಣೆ ಮಾಡತಕ್ಕದ್ದಲ್ಲ. ಹಾಗೂ ಅಳಿಸತಕ್ಕದ್ದಲ್ಲ. ಆದರೆ ಶಿವಮೊಗ್ಗ ಹಾಲು ಒಕ್ಕೂಟ ನೀಡಬಹುದಾದ ಸೂಚನೆಗಳಿಗೆ ಈ ಕಟ್ಟುಪಾಡು ಅನ್ವಯಿಸುವುದಿಲ್ಲ ಅಥವಾ ದರಪಟ್ಟಿದಾರ ಅಕಸ್ಮಾತಾಗಿ ಮಾಡಿರಬಹುದಾದ ತಪ್ಪುಗಳನ್ನು ಅಗತ್ಯವಾಗಿ ಸರಿಪಡಿಸಬಹುದಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ದಸ್ತಾವೇಜಿನಲ್ಲಿ ಸಹಿ ಮಾಡುವ ಅಧಿಕೃತ ದರಪಟ್ಟಿದಾರ ತನ್ನ ಹೆಸರಿನ ಅಧ್ಯ–ಅಕ್ಷರಗಳ ಸಹಿ ಮಾಡತಕ್ಕದ್ದು, ಬರವಣಿಗೆಯ ಮೇಲೆ ಬರವಣಿಗೆ ಮಾಡಲು ಅನುಮತಿ ಇರುವುದಿಲ್ಲ.

**12.0 ದರಪಟ್ಟಿ ಸಲ್ಲಿಕೆಗೆ ಅಂತಿಮ ದಿನಾಂಕ ಪ್ರಕಟಣೆ :**

12.1 ದರಪಟ್ಟಿ ಸಲ್ಲಿಕೆಗೆ ಆಹ್ವಾನಿಸಿದ ಸಂದರ್ಭ ನಿಗದಿಪಡಿಸಿದ ದಿನಾಂಕ ಹಾಗೂ ವೇಳೆಯೊಳಗೆ ಸಂಬಂಧಪಟ್ಟ ದಸ್ತಾವೇಜನ್ನು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ತಲುಪಿಸತಕ್ಕದ್ದು.

12.2 ಶಿವಮೊಗ್ಗ ಹಾಲು ಒಕ್ಕೂಟವು ತನ್ನ ವಿವೇಚನೆಗೆ ಅಗತ್ಯ ಕಂಡು ಬಂದರೆ ಟೆಂಡರ್‌ನಲ್ಲಿ ಪ್ರಕಟಿಸಿದ ಅಂತಿಮ ದಿನಾಂಕವನ್ನು ಮುಂದೂಡಬಹುದಾಗಿರುತ್ತದೆ. ನಂತರ ತಿದ್ದುಪಡಿ ದಿನಾಂಕವನ್ನು ಪ್ರಕಟಿಸಲು ಶಿವಮೊಗ್ಗ ಹಾಲು ಒಕ್ಕೂಟವು ಹಾಗೂ ದರಪಟ್ಟಿದಾರರ ನಡುವಣ ತನ್ನ ಹಕ್ಕು ಹಾಗೂ ಬಾಧ್ಯತೆಯಿಂದ ಹಿಂದೆ ಪ್ರಕಟಿಸಿದ ಮೂಲ ಕೊನೆಯ ದಿನಾಂಕದ ಸಿಂಧುತ್ವವನ್ನು ರದ್ದುಗೊಳಿಸಿ, ಮುಂದೂಡಿದ ಹೊಸ ಅಂತಿಮ ದಿನಾಂಕವನ್ನು ಪ್ರಕಟಿಸಿ ಸಿಂಧುಗೊಳಿಸಬಹುದಾಗಿರುತ್ತದೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

**13.0 ತಡವಾಗಿ ಸಲ್ಲಿಕೆಯಾಗುವ ದರಪಟ್ಟಿ ದಸ್ತಾವೇಜುಗಳು :**

13.1 ಶಿವಮೊಗ್ಗ ಹಾಲು ಒಕ್ಕೂಟವು ಅಂತಿಮ ದಿನಾಂಕ ಹಾಗೂ ವೇಳೆ ಮೀರಿ ತಲುಪುವ ಯಾವುದೇ ದರಪಟ್ಟಿ ದಸ್ತಾವೇಜುಗಳನ್ನು ದರಪಟ್ಟಿ ಸಲ್ಲಿಕೆಗೆ ಆಹ್ವಾನಿಸಿದ ಸಂದರ್ಭದಲ್ಲಿ ಪ್ರಕಟಿಸಲಾದ ಅಂತಿಮ ದಿನಾಂಕ ಹಾಗೂ ವೇಳೆಯನ್ನು ಪರಿಗಣಿಸಿ ಹಾಗೂ ಕಾನೂನು ನಿಯಮದ ಹಿನ್ನೆಲೆಯಲ್ಲಿ ಅವುಗಳನ್ನು ತೆರೆಯದೆಯೇ, ದರಪಟ್ಟಿದಾರರಿಗೆ ಹಿಂದಿರುಗಿಸಲಾಗುವುದು.

**14.0 ದರಪಟ್ಟಿ ದಸ್ತಾವೇಜು ತೆರೆಯುವ ಕ್ರಮ :**

14.1 ಶಿವಮೊಗ್ಗ ಹಾಲು ಒಕ್ಕೂಟವು ದರಪಟ್ಟಿ ದಸ್ತಾವೇಜು ಸಲ್ಲಿಸಿದ ಎಲ್ಲಾ ದರಪಟ್ಟಿದಾರರ ಪ್ರತಿನಿಧಿಗಳ ಸಮ್ಮುಖದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ಶೇಖರಣೆ ಮತ್ತು ತಾಂತ್ರಿಕ ವಿಭಾಗದ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ತೆರೆಯಲಾಗುತ್ತದೆ. ಅದೂ ಕೂಡ ದರಪಟ್ಟಿದಾರರು ಶಿವಮೊಗ್ಗ ಹಾಲು ಒಕ್ಕೂಟದೊಂದಿಗೆ ಸಂಪರ್ಕ ಏರ್ಪಡಿಸಿಕೊಂಡು ಆಯ್ಕೆ ಮಾಡಿಕೊಳ್ಳುವ ಕಛೇರಿಯ ವೇಳೆಯಲ್ಲಿಯೇ ಜೊತೆಗೆ ದರಪಟ್ಟಿ ಸಲ್ಲಿಕೆಗೆ ಆಹ್ವಾನಿಸಿದ ಸಂದರ್ಭದಲ್ಲಿ ಸೂಚಿಸಲಾಗಿದ್ದ ಅಂತಿಮ ದಿನಾಂಕ ಹಾಗೂ ವೇಳೆಗೆ ಅನುಗುಣವಾಗಿ ಈ ಪ್ರಕ್ರಿಯೆ ನಡೆಯುತ್ತದೆ. ಹಾಜರಾದ ದರಪಟ್ಟಿ ಸಲ್ಲಿಕೆದಾರರು ಅಥವಾ ಅವರ ಪ್ರತಿನಿಧಿಗಳು ಕಛೇರಿಯ ಕಡತದಲ್ಲಿ ತಮ್ಮ ಹಾಜರಾತಿಯನ್ನು ದೃಢೀಕರಿಸಲು ಹಾಜರಾತಿಗೆ ಸಹಿ ಹಾಕಬೇಕಾಗುತ್ತದೆ. ಆದೇಶ ಟೆಂಡರ್‌ದಾರರ ಹಾಜರಾತಿಯು ಕಡ್ಡಾಯವಾಗಿರುವುದಿಲ್ಲ.

**15.0 ಜವಾಬ್ದಾರಿಯುತವಾಗಿ ಸಲ್ಲಿಕೆಯಾಗಿರುವ ಕುರಿತು ನಿರ್ಧಾರ :**

15.1 ದರಪಟ್ಟಿ ದಸ್ತಾವೇಜಿನ ವಿವರ ಮೌಲ್ಯಮಾಪನಕ್ಕೆ ಪೂರ್ವಭಾವಿಯಾಗಿ ಪ್ರತಿಯೊಂದು ದರಪಟ್ಟಿ ದಸ್ತಾವೇಜುಗಳು ಎಲ್ಲಾ ರೀತಿಯಿಂದಲೂ ಅಗತ್ಯಕ್ಕೆ ತಕ್ಕಂತೆ ಜವಾಬ್ದಾರಿಯುತವಾಗಿ ಸಲ್ಲಿಕೆ ಆಗಿದೆಯೇ ಎಂದು ನಿರ್ಧಾರ ಕೈಗೊಳ್ಳಲು ಶಿವಮೊಗ್ಗ ಹಾಲು ಒಕ್ಕೂಟವು ಮುಂದಾಗುತ್ತದೆ.

15.2 ನಿಯಮದ ರೀತ್ಯಾ ಇಂತಹ ನಿರ್ಧಾರ ಕೈಗೊಳ್ಳಲು ಎಲ್ಲಾ ರೀತಿಯಿಂದಲೂ ಜವಾಬ್ದಾರಿಯುತವಾಗಿ ಸಲ್ಲಿಕೆಯಾಗಿರುವ ದರಪಟ್ಟಿ ದಸ್ತಾವೇಜು ಎಂದು ಪರಿಗಣಿತವಾಗಲು ಅದು ವಿಧಿಸಲಾಗಿರುವ ನೀತಿ, ನಿಯಮಗಳಿಗೆ ವಿವರ ಮಾಹಿತಿಗೆ ಬದ್ಧವಾಗಿದ್ದು, ಯಾವುದೇ ರೀತಿಯಿಂದಲೂ ವ್ಯತ್ಯಯಗೊಳ್ಳದ ಹಾಗೂ ಕಾಯ್ದಿರಿಸಿದ ರೀತಿಯದ್ದಾಗಿರಬೇಕು. ವ್ಯತ್ಯಯ ಅಥವಾ ಕಾಯ್ದಿರಿಸುವಿಕೆಯಿಂದಾಗಿ ಅದರ ಆಶಯ ಅಥವಾ ಗುತ್ತಿಗೆಯ ಕಾರ್ಯವೈಖರಿಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಅಥವಾ ಕೆಲದೃಷ್ಟಿಯ ಇತಿಮಿತಿಗೊಳ್ಳುತ್ತದೆ. ಜೊತೆಗೆ ದರಪಟ್ಟಿ ದಸ್ತಾವೇಜಿನೊಂದಿಗೆ ಅಸಂಗತಗೊಳ್ಳುತ್ತದೆ. ಶಿವಮೊಗ್ಗ ಹಾಲು ಒಕ್ಕೂಟವು ಹಕ್ಕು ಅಥವಾ ದರಪಟ್ಟಿದಾರರ ಗುತ್ತಿಗೆ ಬಾಧ್ಯತೆ ಇವುಗಳ ಸುಧಾರಣೆ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ವ್ಯತ್ಯಯ ಹಾಗೂ ಕಾಯ್ದಿರಿಸುವಿಕೆ ಇತರೆ ಸ್ಪರ್ಧಾತ್ಮಕ ದರಪಟ್ಟಿದಾರರ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಹಾಗಾಗಿ ಎಲ್ಲಾ ರೀತಿಯಿಂದಲೂ ಜವಾಬ್ದಾರಿಯುತ ದರಪಟ್ಟಿ ದಸ್ತಾವೇಜಿನ ಸಲ್ಲಿಕೆ ಆಗಬೇಕಾಗಿದೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

15.3 ದರಪಟ್ಟಿ ದಸ್ತಾವೇಜಿನ ಅಗತ್ಯಕ್ಕೆ ಅನುಗುಣವಾಗಿ ಜವಾಬ್ದಾರಿಯುತ ಪ್ರತಿಕ್ರಿಯೆ ಇಲ್ಲವಾದಲ್ಲಿ ಅಂತಹವನ್ನು ಶಿವಮೊಗ್ಗ ಹಾಲು ಒಕ್ಕೂಟವು ತಿರಸ್ಕರಿಸುತ್ತದೆ. ಅನಧಿಕೃತ ವ್ಯತ್ಯಯ ಅಥವಾ ಕಾಯ್ದಿರಿಸುವಿಕೆಯನ್ನು ಸರಿಪಡಿಸಲು ಹಿಂತಿರುಗಿ ಪಡೆದುದ್ದನ್ನು ಮತ್ತೆ ಜವಾಬ್ದಾರಿಯುತಗೊಳಿಸಲಾಗುವುದಿಲ್ಲ.

16.0 ಶಿವಮೊಗ್ಗ ಹಾಲು ಒಕ್ಕೂಟ ಯಾವುದೇ ದರಪಟ್ಟಿ ದಸ್ತಾವೇಜನ್ನು ಸ್ವೀಕರಿಸುವುದಕ್ಕೂ ತಿರಸ್ಕರಿಸುವುದಕ್ಕೂ ಅಥವಾ ಎಲ್ಲವನ್ನು ಸಾರಾ ಸಗಟಾಗಿ ತಿರಸ್ಕರಿಸುವುದಕ್ಕೂ ಹಕ್ಕುಳ್ಳದ್ದಾಗಿರುತ್ತದೆ.

16.1 ಮೇಲಿನ ವಿಷಯಗಳನ್ನು ಪೂರೈಸಲಾಗದ ದಸ್ತಾವೇಜನ್ನು ಯಾವುದೇ ಸಮಯದಲ್ಲಿ ಗುತ್ತಿಗೆ ನೀಡಿಕೆಗೆ ಪೂರ್ವಭಾವಿಯಾಗಿ ತಿರಸ್ಕರಿಸುವ ಅಥವಾ ಸ್ವೀಕರಿಸುವ, ಇಲ್ಲವೇ ಪ್ರಕ್ರಿಯೇಯನ್ನೇ ರದ್ದುಪಡಿಸುವ ಹಾಗೂ ಸಾರಾಸಗಟಾಗಿ ಎಲ್ಲವನ್ನೂ ತಿರಸ್ಕರಿಸುವ ಹಕ್ಕನ್ನು ಶಿವಮೊಗ್ಗ ಹಾಲು ಒಕ್ಕೂಟ ಕಾಯ್ದಿರಿಸಿಕೊಂಡಿದೆ. ಪರಿಣಾಮಕ್ಕೆ ಗುರಿಯಾಗುವ ದರಪಟ್ಟಿದಾರರಿಗೆ ಯಾವುದೇ ರೀತಿಯ ಉಪಶಮನಕ್ಕೂ ಬದ್ಧವಾಗದೆ ಮಾಹಿತಿಯನ್ನು ನೀಡಬೇಕಾದ ಹೊಣೆಗಾರಿಕೆಯು ಇಲ್ಲದೇ ಕ್ರಮ ತೆಗೆದುಕೊಳ್ಳಲು ಶಿವಮೊಗ್ಗ ಹಾಲು ಒಕ್ಕೂಟ ಹಕ್ಕುಳ್ಳದ್ದಾಗಿದೆ.

**17.0 ಗುತ್ತಿಗೆ ನೀಡಿಕೆ :**

17.1 ದರಪಟ್ಟಿ ದಸ್ತಾವೇಜು ಹಲವು ದೃಷ್ಟಿಯಿಂದ ಜವಾಬ್ದಾರಿಯುತವಾದುದು ಎಂದು ಪರಿಗಣಿತವಾಗಿ ಕನಿಷ್ಟ ದರವನ್ನು ದರಪಟ್ಟಿಯಲ್ಲಾಗಲೀ ಅಥವಾ ಸಂಧಾನದಲ್ಲಾಗಲೀ ಸೂಚಿಸಿರುವುದರಿಂದ ಶಿವಮೊಗ್ಗ ಹಾಲು ಒಕ್ಕೂಟವು ನಿಯಮಾನುಸಾರ ದರಪಟ್ಟಿದಾರನಿಗೆ ಸಾರಿಗೆ ಗುತ್ತಿಗೆ ನೀಡಬಹುದಾಗಿರುತ್ತದೆ. ಹಲವು ದೃಷ್ಟಿಯಿಂದ ಜವಾಬ್ದಾರಿಯುತವಾದವು ಎಂದು ಪರಿಗಣಿತವಾದ ದರಪಟ್ಟಿ ದಸ್ತಾವೇಜಿನ ತೌಲನಿಕ ತಃಖ್ತೆ ಮೂಲಕ ಮೌಲ್ಯಮಾಪನ ಮಾಡಲಾಗದೆ ಹಾಗೂ ಸಾರಿಗೆ ಗುತ್ತಿಗೆ ಕಾಮಗಾರಿಯನ್ನು ಪರಿಣಾಮಯುತವಾಗಿ ನಿರ್ವಹಿಸಬಲ್ಲೆ ಎಂಬ ಸಾಮರ್ಥ್ಯ ಹಾಗೂ ಸಂಪನ್ಮೂಲದ ಬಗೆಗೆ ದೃಢೀಕರಣ ಒದಗಿಸಿದರೆ ಗುತ್ತಿಗೆಯನ್ನು ನೀಡಬಹುದಾಗಿರುತ್ತದೆ.

17.2 ಶಿವಮೊಗ್ಗ ಹಾಲು ಒಕ್ಕೂಟವು ನಾಮಮಾತ್ರ ಸದಸ್ಯತ್ವಕ್ಕಾಗಿ ನಿಗದಿತ ಮೊತ್ತ ಪಾವತಿಸಿದ ಅವರು / ಅವಳು ಪಡೆದುಕೊಂಡ ನಂತರ ಗುತ್ತಿಗೆಯನ್ನು ನೀಡಬಹುದಾಗಿರುತ್ತದೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

# ಅನುಬಂಧ – ಸಿ

1) ಕ್ರ.ಸಂ. 1 ರ ಮಾರ್ಗಕ್ಕೆ ಅವುಗಳ ಮುಂದೆ ತೋರಿಸಿರುವಂತೆ ಇ.ಎಂ.ಡಿ.ಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಿಯಾಮವಳಿಯಂತೆ ಪಾವತಿಸುವುದು.
2) ಕ್ರ.ಸಂ. 1 ರ ಮಾರ್ಗಕ್ಕೆ ಟೆಂಡರ್ ಪಡೆದರು ಮಾರ್ಗದ ಮುಂದೆ ಸೂಚಿಸಿರುವಂತೆ ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಎಫ್.ಡಿ ಭದ್ರತಾ ಠೇವಣಿಯನ್ನು ನೀಡುವುದು. ಬ್ಯಾಂಕ್ ಗ್ಯಾರಂಟಿಯನ್ನು ಪಡೆಯುವುದಿಲ್ಲ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

**ವಿಶೇಷ ಸೂಚನೆ :**

1) ಟೆಂಡರ್‌ನಲ್ಲಿ ಪ್ರಕಟಿಸಿದ ಮಾದರಿಯ/ಸಾಮರ್ಥ್ಯದ ಎಸ್.ಎಸ್. ಟ್ಯಾಂಕರ್ ಹಾಲಿನ ಸಾಗಾಣಿಕೆ ವಾಹನವುಳ್ಳವರು ಮಾತ್ರ ಪ್ರತಿ ಟೆಂಡರ್ ಅರ್ಜಿ ಜೊತೆಯಲ್ಲಿ ವಾಹನವಾರು ದಾಖಲಾತಿಗಳನ್ನು ಲಗತ್ತಿಸಿರಬೇಕು.

2) ಟೆಂಡರ್‌ನಲ್ಲಿ ಸೂಚಿಸಿರುವ ಮಾರ್ಗ ಸಂಖ್ಯೆ 1 ರ ವರೆಗಿನ ಮಾರ್ಗಕ್ಕೆ ಶೀಥಲೀಕರಿಸಿದ ಹಾಲನ್ನು ಸಾಗಿಸುವ ಸಾಮರ್ಥ್ಯವುಳ್ಳ ಸ್ಟೇನ್‌ಲೆಸ್ ಸ್ಟೀಲ್ ಇನ್ಸುಲೇಟೆಡ್ ಹಾಲಿನ ಸಾಗಾಣಿಕಾ ಟ್ಯಾಂಕರ್ ವಾಹನಗಳು ಇರಬೇಕು. ಇನ್ಸುಲೇಟೆಡ್ ಕಡ್ಡಾಯವಾಗಿವಾಗಿರುತ್ತದೆ.

3) ಗುತ್ತಿಗೆ ವರ್ಗಾವಣೆಗೆ ಅವಕಾಶವಿರುವುದಿಲ್ಲ. ಆದರೂ ಸಹ ಅನಿವಾರ್ಯ ಸಂದರ್ಭದಲ್ಲಿ ಆದೇಶ ಪಡೆದು ವಾಹನ ಓಡಿಸಿದ ಕನಿಷ್ಟ ಮೂರು ತಿಂಗಳ ನಂತರ, ಅದೇ ಮಾದರಿಯ ಸಾಮರ್ಥ್ಯದ ಹಾಲಿನ ಟ್ಯಾಂಕರ್‌ನ್ನು ಒದಗಿಸಲು ಬದ್ದರಾದಲ್ಲಿ ಅಥವಾ ವ್ಯವಸ್ಥೆ ಮಾಡಿದಲ್ಲಿ ನಿಯಾಮಾನುಸಾರ ವರ್ಗಾವಣೆ ಶುಲ್ಕ ರೂ.10,000/- ಪಾವತಿಸಿದಲ್ಲಿ ಒಂದು ಬಾರಿ ಮಾತ್ರ ಮಾಡಲಾಗುವುದು.

4) ಈ ಟೆಂಡರ್‌ನಲ್ಲಿ ಒಂದು ಮಾರ್ಗದ ಗುತ್ತಿಗೆಯಲ್ಲಿ, ಭಾಗವಹಿಸುವ ವಾಹನ ಇನ್ನೊಂದು ಮಾರ್ಗದ ಗುತ್ತಿಗೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ ಹಾಗೂ ಹಾಲಿ ಇರುವ ಗುತ್ತಿಗೆದಾರರು ಇನ್ನೂ ಟೆಂಡರ್ ಅವಧಿ ಮುಗಿಯದೇ ಇರುವ ಟೆಂಡರ್‌ನಲ್ಲಿ ಪ್ರಕಟಿಸಿದ ಮಾರ್ಗಗಳಿಗೆ ಹೊರತುಪಡಿಸಿ ಇತರೆ ಮಾರ್ಗಗಳಿಗೆ ನೀಡಿರುವ ವಾಹನ ದಾಖಲಾತಿಗಳನ್ನು ಈ ಟೆಂಡರಿಗೆ ಸಲ್ಲಿಸುವಂತಿಲ್ಲ.

4) ಕ್ರ.ಸಂ 1 ರ ಹಾಲು ಸಾಗಾಣಿಕೆ ಟ್ಯಾಂಕರ್ ಮಾರ್ಗಕ್ಕೆ ಪ್ರಕಟಿಸಿದಂತೆ **ನಿಗದಿತ ಸಾಮರ್ಥ್ಯದ ಎಸ್.ಎಸ್. ಇನ್ಸೂಲೆಟೆಡ್ ಹಾಲಿನ ಟ್ಯಾಂಕರ್ ವಾಹನ ಹೊಂದಿದವರು ಮಾತ್ರ** (ಆರ್.ಸಿ. ಪುಸ್ತಕದಲ್ಲಿ ಹಾಲಿನ ಟ್ಯಾಂಕರ್ ಮತ್ತು ಸಾಮರ್ಥ್ಯ ದಾಖಲಾಗಿರಬೇಕು) ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ. ವಾಹನಕ್ಕೆ ಸಂಬಂಧಿಸಿದ **B-extract report from the RTO, Upadated RC book including Fitness Certificate, Permit, Insurance, Ownership, Emmission test, Capacity of tanker as per RC book details** ಮುಂತಾದ ಎಲ್ಲಾ ನವೀಕರಣ ದಾಖಲಾತಿಗಳನ್ನು ಅಥವಾ ಸಾರಿಗೆ ಇಲಾಖೆಯಿಂದ ಪಡೆದ ವಾಹನದ ಬಿ.ಎಕ್ಸಾಟ್ರ್ಯಾಕ್ಟ್ ರಿಪೋರ್ಟ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ. **ಒಕ್ಕೂಟದ ವ್ಯಾಪ್ತಿಯಲ್ಲಿ ಮೇಲೆ ತಿಳಿಸಿರುವ ಮಾರ್ಗಗಳಲ್ಲಿ ಹಾಲಿ ಚಲಿಸುತ್ತಿರುವ ಟ್ಯಾಂಕರ್‌ಗಳನ್ನು ಹೊರತುಪಡಿಸಿ ಟೆಂಡರ್ ಅವಧಿ ಮುಗಿಯದೇ ಇರುವ ಟ್ಯಾಂಕರ್ ಮಾರ್ಗಗಳ ವಾಹನದ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವಂತಿಲ್ಲ.**

ಈ ಮೇಲೆ ತಿಳಿಸಿರುವಂತೆ ಟೆಂಡರ್ ಒಪ್ಪಿಗೆಯಾದಲ್ಲಿ ಆಯಾ ಮಾರ್ಗದ ಮುಂದೆ ಸೂಚಿಸಿದ ಭದ್ರತಾ ಠೇವಣಿ ನೀಡಲು ಒಪ್ಪಿರುತ್ತೇನೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

# ಅನುಬಂಧ – ಡಿ

**1.0 ಗುತ್ತಿಗೆ ನಿಯಮ ನಿಬಂಧನೆಗಳು :**

ಗುತ್ತಿಗೆದಾರರು ಸಾಗಾಣಿಕೆದಾರರು ಅವರಿಗೆ ಈ ಉದ್ದೇಶದಿಂದ ಒಪ್ಪಿಸಿರುವ ನಿಗದಿತ ಮಾರ್ಗಗಳಲ್ಲಿ ಹಾಲನ್ನು ಬಿ.ಎಂ.ಸಿ ಕೇಂದ್ರದಿಂದ ಬೆಳಿಗ್ಗೆ ಹಾಗೂ ಮಧ್ಯಾಹ್ನ ಎರಡೂ ವೇಳೆ ಅಥವಾ ಡೇರಿ ನಿಗದಿಪಡಿಸಿರುವ ವೇಳಾಪಟ್ಟಿಯಂತೆ ಸಂಗ್ರಹಣೆ/ಸಾಗಾಣಿಕೆ ಮಾಡತಕ್ಕದ್ದು.

1. ಅ) ಬಿ.ಎಂ.ಸಿ. ಕೇಂದ್ರದಿಂದ ಹಾಲನ್ನು ಟ್ಯಾಂಕರ್‌ಗೆ ಲೋಡ್ ಮಾಡುವ ಮುನ್ನ ಸಂದರ್ಭದಲ್ಲಿ ಗುತ್ತಿಗೆದಾರರು ಅಥವಾ ಗುತ್ತಿಗೆದಾರ ಅಧಿಕೃತವಾಗಿ ನೇಮಿಸಿಕೊಳ್ಳುವ ಪ್ರತಿನಿಧಿಗಳು, ಹಾಲಿನ ಗುಣಮಟ್ಟ, ತೂಕ, ಅಳತೆಯನ್ನು ಖುದ್ದಾಗಿ ಪರೀಕ್ಷಿಸಿ ದಾಖಲು ಮಾಡಿಕೊಂಡು ಬಿ.ಎಂ.ಸಿ. ಕೇಂದ್ರದವರು ನೀಡುವ ಡೇಲವರಿ/ಗೇಟ್‌ಪಾಸ್ ತಾಳೆ ಮಾಡಿಕೊಳ್ಳುವುದು.

ಆ) ನಿಗದಿತ ಬಿ.ಎಂ.ಸಿ. ಕೇಂದ್ರದಿಂದ ಹಾಲನ್ನು ಡೇರಿಗೆ ಸಾಗಾಣಿಕೆ ಮಾಡಿ ಅನ್‌ಲೋಡ್ ಮಾಡಿದ ನಂತರ ಡೇರಿಯ ಹೊರಗೆ ಹೋಗಲು ಸಂಬಂಧಿಸಿದ ವಿಭಾಗದಿಂದ ಅಧಿಕೃತ ಅನುಮತಿ (out pass) ಪಡೆಯತಕ್ಕದ್ದು.

2. ದರಪಟ್ಟಿ , ದಸ್ತಾವೇಜು, ಅಂಗೀಕಾರ ಆದ ಮೇಲೆ ಗುತ್ತಿಗೆದಾರರು ಆಧಾರದ ಮೊತ್ತವಾಗಿ ಭದ್ರತಾ ಠೇವಣಿ ಇಡು ಹಣವನ್ನು ಆಯಾ ಮಾರ್ಗಗಳಿಗೆ ಸೂಚಿಸಿರುವಂತೆ ಪಾವತಿಸತಕ್ಕದ್ದು. ಈ ರೀತಿಯ ಆಧಾರ ಮೊತ್ತವನ್ನು ಸಂಸ್ಥೆಯಲ್ಲಿ ಎಫ್.ಡಿ. ರೂಪದಲ್ಲಿ ಇರಿಸತಕ್ಕದ್ದು ಮತ್ತು ಈ ಮೊತ್ತಕ್ಕೆ ಬಡ್ಡಿ ನೀಡಲಾಗುವುದಿಲ್ಲ. ಗುತ್ತಿಗೆ ಅವಧಿ ಮುಕ್ತಾಯದ ನಂತರ ಸಂಸ್ಥೆಗೆ ಯಾವುದೇ ಬಾಕಿ ಇಲ್ಲವೆಂದು ದೃಢಪಟ್ಟನಂತರ ಎಫ್.ಡಿ ಬಾಂಡ್ ಹಿಂತಿರುಗಿಸಲಾಗುವುದು. ಗುತ್ತಿಗೆದಾರರು ತಮ್ಮ ಕರ್ತವ್ಯದಿಂದ ವಿಮುಖನಾದರೆ ಅಂತಹವರು ಡೇರಿಯಲ್ಲಿಟ್ಟಿರುವ ಇಡು ಹಣವನ್ನು/ಎಫ್.ಡಿ.ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

3. ಗುತ್ತಿಗೆದಾರ ತನಗೆ ದತ್ತವಾದ ಗುತ್ತಿಗೆಯನ್ನು ಮತ್ತೊಬ್ಬರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ. ಆದರೂ ಸಹ ಅನಿವಾರ್ಯ ಸಂದರ್ಭದಲ್ಲಿ ಆದೇಶ ಪಡೆದು ವಾಹನ ಓಡಿಸಿದ ಕನಿಷ್ಟ ಮೂರು ತಿಂಗಳ ನಂತರ ಆದೇಶ ನೀಡಿದ ಸಾಮರ್ಥ್ಯದ ಹಾಲಿನ ಟ್ಯಾಂಕರ್‌ನ್ನು ವ್ಯವಸ್ಥೆ ಮಾಡಲು ಬದ್ಧರಾದಲ್ಲಿ ನಿಯಾಮಾನುಸಾರ ವರ್ಗಾವಣೆ ಶುಲ್ಕ ರೂ.10,000/– ಪಾವತಿಸಿದಲ್ಲಿ ಒಂದು ಬಾರಿ ಮಾತ್ರ ವರ್ಗಾವಣೆ ಮಾಡಲಾಗುವುದು.

4. ಶಿವಮೊಗ್ಗ ಹಾಲು ಒಕ್ಕೂಟವು ತನ್ನ ಅಂತಿಮ ಆದೇಶದಲ್ಲಿ ಸೂಚಿತ ದಿನಾಂಕದಿಂದು ಆರಂಭಗೊಂಡು ಎರಡು ವರ್ಷಗಳ ಅವಧಿಗೆ ಸಾಗಾಣಿಕೆ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು. ಅಥವಾ ಡೇರಿಯು ತನ್ನ ವಿವೇಚನೆಗೆ ಸರಿಯೆಂದು ಕಂಡುಬಂದಲ್ಲಿ ಎಂಥದೇ ಸಂದರ್ಭದಲ್ಲಿ ಯಾವುದೇ ಕಾರಣ ನೀಡದೇ ಸಾಗಾಣಿಕೆ ಕಾಮಗಾರಿಯ ಅವಧಿಯನ್ನು ಕಡಿಮೆ ಅವಧಿಗೆ ನಿಗದಿಪಡಿಸಲು ಅಧಿಕಾರ ಉಳ್ಳದ್ದಾಗಿರುತ್ತದೆ.

5. ಸಾಗಾಣಿಕೆ ಕಾಮಗಾರಿಯಲ್ಲಿ ವಿಮುಖನಾದ ಗುತ್ತಿಗೆದಾರನನ್ನು ಅವಧಿಗೆ ಮುಂಚೆಯೇ ವಜಾ ಮಾಡಿದರೆ ಅಂತಹವನು ಇರಿಸಿರುವ ಇಡು ಹಣವನ್ನು ಭಾಗಶಃ ಅಥವಾ ಪೂರ್ಣ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಯಾವುದು ಸರಿಯೆಂದು ಶಿವಮೊಗ್ಗ ಹಾಲು ಒಕ್ಕೂಟವು ನಿರ್ಧರಿಸುತ್ತದೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**

(ದಪ್ಪ ಅಕ್ಷರಗಳಲ್ಲಿ)

6. ಗುತ್ತಿಗೆದಾರರಿಗೆ ವಹಿಸಿರುವ ಸಾಗಾಣಿಕೆ ಮಾರ್ಗಗಳಲ್ಲಿ ಕೆಲವು ಗುತ್ತಿಗೆದಾರರ ಅಥವಾ ಎಲ್ಲಾ ಗುತ್ತಿಗೆದಾರರ ಸಾಗಾಣಿಕೆ ಮಾರ್ಗಗಳನ್ನು ಯಾವುದೇ ಕಾರಣ ನೀಡದೆ ಎಷ್ಟೇ ಅವಧಿಯವರೆಗೆ ಶಿವಮೊಗ್ಗ ಹಾಲು ಒಕ್ಕೂಟವು ತನ್ನ ವಿವೇಚನೆಗೆ ಸರಿಯೆಂದು ಕಂಡುಬಂದರೆ ಅಮಾನತುಗೊಳಿಸಬಹುದಾಗಿರುತ್ತದೆ.

7. ಗುತ್ತಿಗೆದಾರರಿಗೆ ವಹಿಸಿರುವ ಬಿ.ಎಂ.ಸಿ. ಸಾಗಾಣಿಕೆ ಮಾರ್ಗಗಳಲ್ಲಿ ಕೆಲವು ಗುತ್ತಿಗೆದಾರರ ಅಥವಾ ಎಲ್ಲಾ ಗುತ್ತಿಗೆದಾರರ ಅಂಗೀಕಾರ ಪಡೆದ ಸಾಗಾಣಿಕೆ ಅವಧಿಯಲ್ಲಿ ಯಾವ ಸಮಯದಲ್ಲಿ ಬೇಕಾದರೂ ಅಮಾನತು ಆಜ್ಞೆಯನ್ನು ಶಿವಮೊಗ್ಗ ಹಾಲು ಒಕ್ಕೂಟ ಹಿಂದಕ್ಕೆ ಪಡೆಯಲು ಅಧಿಕಾರ ಉಳದ್ದಾಗಿರುತ್ತದೆ.

8. ಶಿವಮೊಗ್ಗ ಹಾಲು ಒಕ್ಕೂಟ ಸೂಚಿಸುವ ನಿರ್ದಿಷ್ಟ ದಿನಾಂಕದಿಂದ ಬಿ.ಎಂ.ಸಿ. ಹಾಲು ಶೇಖರಣಾ ಮಾರ್ಗದಲ್ಲಿ ಕೆಲವು ಅಥವಾ ಎಲ್ಲಾ ಮಾರ್ಗದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ಸೂಚಿಸುವ ಗುತ್ತಿಗೆ ದರದನ್ವಯ ಸಾಗಾಣಿಕೆ ಕಾಮಗಾರಿಯನ್ನು ಪುನಾರಂಭಿಸಬಹುದಾಗಿರುತ್ತದೆ.

9. ಸಾಗಾಣಿಕೆ ಕಾಮಗಾರಿಯನ್ನು ಅಮಾನತುಗೊಳಿಸಿದ ಕಾರಣಕ್ಕಾಗಿ ಗುತ್ತಿಗೆದಾರರಿಗೆ ಪರಿಹಾರ ಧನವನ್ನು ನೀಡಲಾಗುವುದಿಲ್ಲ.

10. ಒಪ್ಪಂದವಾದ ಅರ್ಹ ಗುತ್ತಿಗೆ ಅವಧಿ ಮುಕ್ತಾಯವಾದ ಮೇಲೂ 3 ತಿಂಗಳಿಗೆ ಮೀರದಂತೆ ಗುತ್ತಿಗೆ ಅವಧಿಯನ್ನು ವಿಸ್ತರಿಸಲು ಹಾಗೂ ಪ್ರಕೃತಿ ವಿಕೋಪ, ತುರ್ತು ಸಂದರ್ಭ ಮತ್ತು ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಒಕ್ಕೂಟವು ತನ್ನ ವಿವೇಚನೆ ಮೇರೆಗೆ ಮತ್ತೊಮ್ಮೆ 3 ತಿಂಗಳು ಒಪ್ಪಂದವನ್ನು ಮುಂದುವರೆಸುವ ಅಧಿಕಾರವನ್ನು ಹೊಂದಿರುತ್ತದೆ. ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಅವಕಾಶವಿರುತ್ತದೆ.

11. ಗುತ್ತಿಗೆದಾರ ತನ್ನ ಸ್ವಂತ ವಾಹನವನ್ನು ಸಾಗಾಣಿಕೆ ಮಾರ್ಗಕ್ಕೆ ಓಡಿಸತಕ್ಕದ್ದು, ಹಾಗೂ ವಾಹನಕ್ಕೆ ಸಂಬಂಧಪಟ್ಟ ನೋಂದಣಿ, ನೋಂದಾವಣಿ ಪ್ರಮಾಣ ಪತ್ರ ತೆರಿಗೆ ಪಾವತಿ ರಶೀದಿ, ವಿಮಾ ಪ್ರಮಾಣ ಪತ್ರ ಹಾಗೂ ಇತರ ಎಲ್ಲಾ ಅಗತ್ಯ ಪ್ರಮಾಣ ಪತ್ರಗಳೂ, ಕಾಗದ ಪತ್ರಗಳ ಮೂಲ ಪ್ರತಿಯನ್ನು ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರ ಸಮ್ಮುಖದಲ್ಲಿ ಹಾಜರು ಪಡಿಸಿ ಸ್ವಂತ ವಾಹನವೆಂದು ದೃಡಪಡಿಸಿ ಸಾಗಾಣಿಕೆ ಕಾಮಗಾರಿಯ ಗುತ್ತಿಗೆ ಕಾರ್ಯಕ್ಕೆ ಪ್ರವೇಶಿಸಬೇಕಾಗುತ್ತದೆ ಮಾರ್ಗದಲ್ಲಿ ಸಮರ್ಥವಾಗಿ ಓಡಬಲ್ಲದೆಂದು ಶೀಥಲಿಕರಿಸಿದ ಹಾಲನ್ನು ಸಾಗಿಸಬಲ್ಲದೆಂದು ದೃಢಪಡಿಸಬೇಕಾಗುತ್ತದೆ. ಶಿವಮೊಗ್ಗ ಹಾಲು ಒಕ್ಕೂಟವು ಹಾಲಿನ ಟ್ಯಾಂಕರ್ ಹಾಲನ್ನು ಸಾಗಿಸಲು ಸಮರ್ಥವಲ್ಲವೆಂದು ಪರಿಗಣಿಸಿದರೆ ಅಂತಹ ವಾಹನಗಳನ್ನು ಬದಲಿಸುತ್ತೇನೆಂದು ಪ್ರಮಾಣಿಸಿದ ನಂತರ ಗುತ್ತಿಗೆ ಕಾರ್ಯ ಕೈಗೊಳ್ಳಬಹುದಾಗಿರುತ್ತದೆ.

12. ಆರೋಗ್ಯ ಇಲಾಖೆಯಿಂದ ಹಾಲನ್ನು ಅಂದರೆ ಆಹಾರ ಪದಾರ್ಥಗಳನ್ನು ತನ್ನ ವಾಹನದಲ್ಲಿ ಸಾಗಾಣಿಕೆ ಮಾಡಬಹುದು ಎಂದು ಆರೋಗ್ಯ ಇಲಾಖೆಯಿಂದ ಅಗತ್ಯ ಅನುಮತಿ ಪತ್ರ (FSSAI) ಪಡೆದಿರುವುದನ್ನು ಟೆಂಡರ್‌ದಾರರು ಇ–ಪೋರ್ಟಲ್ ಮುಖೇನ ಅಪ್‌ಲೋಡ್ ಮಾಡ ತಕ್ಕದ್ದು ಮತ್ತು ನಂತರ ಪರಿಶೀಲನೆಗೆ ಒದಗಿಸತಕ್ಕದ್ದು.

13. ಗುತ್ತಿಗೆ ವಾಹನಕ್ಕೆ ಸಂಬಂಧಿಸಿದಂತೆ ಗುತ್ತಿಗೆದಾರ ಈ ಕೆಳಗೆ ಸೂಚಿಸಿರುವ ಅಗತ್ಯಗಳನ್ನು ಹಾಗೂ ನಿರ್ದಿಷ್ಟ ಮಾಹಿತಿಗಳನ್ನು ಪೂರೈಕೆ ಮಾಡುತ್ತೇನೆ ಎಂದು ಒಪ್ಪಿಗೆ ಸೂಚಿಸತಕ್ಕದ್ದು.

13ಅ. ಗುತ್ತಿಗೆ ವಾಹನ, ಇನ್ಸುಲೇಟೆಡ್ ಕಂಟೇನರ್ ಬಾಡಿ ಅಳವಡಿಸಿದ ಹಾಲಿನ ಟ್ಯಾಂಕರ್ ವಾಹನ ಆಗಿರಬೇಕು. ಮತ್ತು ವಾಹನವು ಸುಸ್ಥಿತಿಯಲ್ಲಿದ್ದು, ವಾಹನದ ಹಿಂಬದಿಯಲ್ಲಿ ಟ್ಯಾಂಕರ್ ಮೇಲೆ ಬಿ.ಎಂ.ಸಿ ಮಾರ್ಗದ ಹೆಸರು ವ್ಯಾಪ್ತಿಯಲ್ಲಿನ ಬಿ.ಎಂ.ಸಿ. ಕೇಂದ್ರಗಳ ಹೆಸರನ್ನು ಮಾತ್ರ ಬರೆಸಿರಬೇಕು/ಬರೆಯಿಸಬೇಕು.

13ಬಿ. ರಾತ್ರಿ ಅವಧಿಯಲ್ಲಿ ವಾಹನಕ್ಕೆ ಹಾಲು ಭರ್ತಿಮಾಡಲು ಹಾಗೂ ಇಳಿಸಲು ಅನುಕೂಲವಾಗುವಂತೆ ವಾಹನದ ಅಗತ್ಯ ಕಡೆಗಳೆಲ್ಲೆಲ್ಲಾ ಬೆಳಕಿನ ವ್ಯವಸ್ಥೆ ಮಾಡಿರತಕ್ಕದ್ದು.

**ಟೆಂಡರ್‌ದಾರರ ಸಹಿ ಮತ್ತು ಹೆಸರು**

(ದಪ್ಪ ಅಕ್ಷರಗಳಲ್ಲಿ)

13ಸಿ. ಹಾಲಿನ ಟ್ಯಾಂಕರ್ ವಾಹನಕ್ಕೆ ಭದ್ರವಾದ ಬಿಗಿ ಮ್ಯಾನ್‌ಹೋಲ್ ಗ್ಯಾಸ್‌ಕೆಟ್ ಹಿಂಬಾಗಿಲು ಇರತಕ್ಕದ್ದು.ಕೆನೆ ಬಣ್ಣವನ್ನು ಆ ಬಾಗಿಲಿಗೆ ಬಳಿಸಿರಬೇಕು ಅಥವಾ ಆರ್.ಟಿ.ಒ. ಇಲಾಖೆ ನಿರ್ದಿಷ್ಟವಾಗಿ ಸೂಚಿಸುವ ಬಣ್ಣ ಬಳಿಸಿರಬೇಕು.

14. ಅನುಬಂಧ–ಸಿನಲ್ಲಿ ನಮೂದಿಸಿರುವಂತೆ ಅಗತ್ಯ ಸಾಮರ್ಥ್ಯದ ವಾಹನವನ್ನು ಒದಗಿಸಲು ಗುತ್ತಿಗೆದಾರ ಬದ್ಧರಾಗಿರಬೇಕು/ಒಪ್ಪಿಗೆಯನ್ನು ಸೂಚಿಸತಕ್ಕದ್ದು.

15. ಟ್ಯಾಂಕರ್‌ಗೆ ಹಾಲನ್ನು ಭರ್ತಿ ಮಾಡಲು ಇಳಿಸಲು ಹಾಗೂ ಸಾಗಾಣಿಕೆ ಕಾರ್ಯಕ್ಕೆ ಅಗತ್ಯವಾದ ಕೆಲಸಗಾರರನ್ನು ಗುತ್ತಿಗೆದಾರರೇ ಸ್ವಂತವಾಗಿ ವ್ಯವಸ್ಥೆ ಮಾಡತಕ್ಕದ್ದು. ಚಾಲಕ ಹೊರತು ಪಡಿಸಿ ಕನಿಷ್ಟ ಒಬ್ಬ ಹಾಲು ಪರೀಕ್ಷರನ್ನು ಒದಗಿಸಬೇಕು. ಗುತ್ತಿಗೆ ಕಾರ್ಮಿಕರ ನಿಯಂತ್ರಣ ಹಾಗೂ ರದ್ದತಿ ವಿಧೇಯಕದ ನಿಯಮಕ್ಕೆ ಬದ್ಧನಾಗಿರಲು ಒಪ್ಪಿಗೆ ಸೂಚಿಸತಕ್ಕದ್ದು. ಕಾರ್ಮಿಕ ಕಾನೂನು/ನಿಯಮ ಉಲ್ಲಂಘಿಸಿದ ಕಾರಣದಿಂದಾಗಿ ಗುತ್ತಿಗೆ ಕಾರ್ಮಿಕ ಪರಿಹಾರ ಕೋರಿದರೆ ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಆಗುವ ನಷ್ಟವನ್ನು ಗುತ್ತಿಗೆದಾರ ಭರ್ತಿಮಾಡತಕ್ಕದ್ದು. ಶಿವಮೊಗ್ಗ ಹಾಲು ಒಕ್ಕೂಟವು ನಿಗದಿಪಡಿಸಿರುವ ಸಮವಸ್ತ್ರವನ್ನು ಚಾಲಕ ಹಾಗೂ ಲೋಡರ್‌ಗಳಿಗೆ ಗುತ್ತಿಗೆದಾರ ತನ್ನ ಸ್ವಂತ ಖರ್ಚಿನಲ್ಲಿ ಒದಗಿಸತಕ್ಕದ್ದು.

16. ಕಾರ್ಮಿಕ ಕಾನೂನು ವರ್ಕ್ಸ್‌ಮೆನ್ಸ್ ಕಾಂಪನ್ಸೇಷನ್ ಆಕ್ಟ್ ಅಥವಾ ಇತರೇ ಶಾಸನ ಬದ್ದ ಕಾಯಿದೆ, ನಿಯಮ ನಿಬಂಧನೆಗಳ ಷರತ್ತುಗಳನ್ನು ಪಾಲಿಸಬೇಕಾದ ಜವಾಬ್ದಾರಿ ಗುತ್ತಿಗೆದಾರನ ಮೇಲೆ ಸಂಪೂರ್ಣವಾಗಿ ಇರುತ್ತದೆ. ಹಾಗೂ ಈ ಬಗ್ಗೆ ಯಾವುದೇ ನಷ್ಟ/ಜವಾಬ್ದಾರಿ ಹೊಣೆ ಗುತ್ತಿಗೆದಾರನದ್ದಾಗಿರುತ್ತದೆ.

17. ಶಿವಮೊಗ್ಗ ಹಾಲು ಒಕ್ಕೂಟದ ಅಧಿಕಾರ ವರ್ಗ ಕಾಲಕಾಲಕ್ಕೆ ನೀಡುವ ಹಲವು ಸೂಚನೆಗಳನ್ನು ಎಚ್ಚರಿಕೆಯಿಂದ ಪಾಲಿಸತಕ್ಕದ್ದು. ಅದು ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸುರಕ್ಷಿತವಾಗಿ ಸಾಗಾಣಿಕೆ ಮಾಡುವ ಕುರಿತಾದವುಗಳಾಗಿರಬಹುದು. ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸಾಗಿಸಲು ಒದಗಿಸಿರುವ ಕ್ರೇಟುಗಳು, ಕ್ಯಾನುಗಳು, ಪಾತ್ರೆ ಸಾಮಾನುಗಳ ಕುರಿತಾದವುಗಳಾಗಬಹುದು. ಅವುಗಳನ್ನು ನಜ್ಜು ಗುಜ್ಜು ಮಾಡದೇ, ಪಡೆದ ನಂತರ ಮುರಿದು ಹಾಕದೇ ಸುರಕ್ಷಿತವಾಗಿ ಬಳಸುವ ಕುರಿತಾಗಿರಬಹುದು.

18. ಸಂಘಗಳ/ಹಾಲು ಉತ್ಪಾದಕರ ಅನುಕೂಲಕ್ಕಾಗಿ ಕಾಲಕಾಲಕ್ಕೆ ಶಿವಮೊಗ್ಗ ಹಾಲು ಒಕ್ಕೂಟವು ಬಿ.ಎಂ.ಸಿ. ಹಾಲು ಶೇಖರಣಾ ಮಾರ್ಗದ ಸ್ಥಳಗಳನ್ನು ಬದಲಿಸಬಹುದಾಗಿರುತ್ತದೆ. ಈ ರೀತಿಯ ಬದಲಾವಣೆ ಕಾರಣಕ್ಕಾಗಿ ಮಾರ್ಗದಲ್ಲಿನ ಮಾರಾಟ ಕೇಂದ್ರದಿಂದ ಪಡೆಯಬಹುದಾದ ನಗದು/ತಃಖ್ತೆ ಕಾರಣದಿಂದಾಗಿ ಗುತ್ತಿಗೆದಾರ ಯಾವುದೇ ನಷ್ಟವನ್ನು ಭರಿಸುವಂತೆ ಕೋರಲು ಅವಕಾಶ ಇರುವುದಿಲ್ಲ.

19. ಬಿ.ಎಂ.ಸಿ. ಹಾಲು ಶೇಖರಣೆ ಕೇಂದ್ರಗಳು ಕಡಿಮೆ/ಹೆಚ್ಚಾಗಿ ಒಟ್ಟು ಕ್ರಮಿಸಬೇಕಾದ ದೂರ ವ್ಯತ್ಯಯಗೊಂಡರೂ ಗುತ್ತಿಗೆದಾರ ಸಾಗಾಣಿಕೆ ಕಾಮಗಾರಿಗೆ ತನ್ನ ಒಪ್ಪಿಗೆಯನ್ನು ಸೂಚಿಸತಕ್ಕದ್ದು.

20. ಬಿ.ಎಂ.ಸಿ. ಹಾಲು ಶೇಖರಣೆ ಮಾರ್ಗದ ವಾಹನಗಳ ಪಥವನ್ನು ಶಿವಮೊಗ್ಗ ಹಾಲು ಒಕ್ಕೂಟವು ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು ಹಾಗೂ ಸಂಘಗಳನ್ನು ಕೈಬಿಡಬಹುದು ಅಥವಾ ಸೇರಿಸಬಹುದು, ಇಂತಹ ಸಂದರ್ಭದಲ್ಲಿ ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ.10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಗುತ್ತಿಗೆದಾರರ ಮನವಿಯನ್ನು ಪರಿಗಣಿಸಿ ಮಾರುಕಟ್ಟೆ ಬೆಲೆ ಆಧಾರದ ಮೇಲೆ ಅಥವಾ ಪ್ರೋರೇಟಾ ಆಧಾರದಲ್ಲಿ ಕಿ.ಮೀ.ದರ ಹೆಚ್ಚು ಅಥವಾ ಕಡಿಮೆ ಮಾಡಲಾಗುವುದು. ಅಂತಿಮವಾಗಿ ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರ ನಿರ್ಧಾರವೇ ಅಂತಿಮವಾಗಿರುತ್ತದೆ.

21. ಬಿ.ಎಂ.ಸಿ. ಹಾಲು ಶೇಖರಣೆ ಟ್ಯಾಂಕರ್ ವಾಹನಗಳು ಹಾಲಿನ ಸುಗ್ಗಿಯ ಕಾಲದಲ್ಲಿ ಅಥವಾ ಮಾರುಕಟ್ಟೆಯಲ್ಲಿ ಹಾಲಿನ ಬೇಡಿಕೆಯ ಪ್ರಮಾಣ ಹೆಚ್ಚಾಗಿರುವ ಸಂದರ್ಭದಲ್ಲಿ ಒಕ್ಕೂಟವು ತಿಳಿಸಿದಲ್ಲಿ ಹೆಚ್ಚುವರಿ ಟ್ರಿಪ್‌ಗಳನ್ನು ಮಾಡಲು ಬದ್ಧರಾಗಿರಬೇಕು. ಅಂತಿಮವಾಗಿ ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿದೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**

(ದಪ್ಪ ಅಕ್ಷರಗಳಲ್ಲಿ)

22. ನಿಗಧಿಪಡಿಸಿರುವ ಸಾಗಾಣಿಕೆ ಮಾರ್ಗದಲ್ಲಿ ಓಡಾಡುವ ವಾಹನ ಚಲಿಸಲು ಸಾಧ್ಯವಾಗದೆ ಕೆಟ್ಟುನಿಂತರೆ 30 ನಿಮಿಷಗಳೊಗಾಗಿ ಬದಲಿ ವಾಹನವನ್ನು ಖಚಿತವಾಗಿ ವ್ಯವಸ್ಥೆ ಮಾಡಬೇಕಾದ ಹೊಣೆಗಾರಿಕೆ ಗುತ್ತಿಗೆದಾರನದಾಗಿರುತ್ತದೆ.

23. ಶಿವಮೊಗ್ಗ ಹಾಲು ಒಕ್ಕೂಟದ ನೌಕರ ವರ್ಗ, ಅಧಿಕೃತ ಪ್ರತಿನಿಧಿಗಳು, ಗುತ್ತಿಗೆದಾರನ ವಾಹನಗಳಲ್ಲಿ ಗುತ್ತಿಗೆದಾರನ ಸಿಬ್ಬಂದಿಯ ಜೊತೆಗೆ ಉಚಿತವಾಗಿ ಪ್ರಯಾಣಿಸಲು ಅನುಮತಿಯನ್ನು ಗುತ್ತಿಗೆದಾರ ನೀಡತಕ್ಕದ್ದು.

24. ಗುತ್ತಿಗೆ ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ನೌಕರ ವರ್ಗ ಅಥವಾ ಗುತ್ತಿಗೆದಾರ ಸಾಗಾಣಿಕೆ ಹಾಗೂ ಭರ್ತಿಮಾಡಲು ಇಳಿಸಲು ನೇಮಿಸಿಕೊಂಡಿರುವ ಸಿಬ್ಬಂದಿಗಳನ್ನು ಹೊರತುಪಡಿಸಿ ಮತ್ತಾರನ್ನೂ ಈ ಕಾರ್ಯಕ್ಕೆ ನೇಮಕ ಆಗಿರುವ ವಾಹನಗಳಲ್ಲಿ ಸಂಚರಿಸಲು ಅವಕಾಶ ನೀಡತಕ್ಕದ್ದಲ್ಲ.

25. ಸಾಗಾಣಿಕೆಗೆ ಅನುಮತಿ ನೀಡಿರುವ ಸಾಮಾಗ್ರಿಗಳನ್ನಲ್ಲದೆ ಮತ್ತಾವುದೇ ಸಾಮಾಗ್ರಿಗಳನ್ನು ಈ ವಾಹನದಲ್ಲಿ ಸಾಗಿಸತಕ್ಕದ್ದಲ್ಲ.

26. ಸಾಗಾಣಿಕೆ ವೆಚ್ಚ ಈ ಕೆಳಕಂಡ ವಿಷಯಕ್ಕೆ ಹೊರತುಪಡಿಸಿ ಬೇರೆ ಯಾವುದೇ ಕಾರಣಕ್ಕೆ ಏರಿಕೆ ಸಾಧ್ಯವಿಲ್ಲ. ಐ.ಓ.ಸಿ., ಜಿ.ಒ.ಕೆ., ಡೀಸೆಲ್‌ನ ಪ್ರತಿ ಲೀಟರ್‌ನ ಬೆಲೆಯಲ್ಲಿ ಹೆಚ್ಚಳ ಮಾಡುವ ಪರಿಮಾಣವನ್ನು ವಿವಿಧ ಸಾಮರ್ಥ್ಯದ ವಾಹನಗಳಿಗನುಗುಣವಾಗಿ ಹೆಚ್ಚಳದ ಅಥವಾ ಇಳಿಕೆಯ ಪ್ರಮಾಣ ಪ್ರತಿ ಲೀಟರ್‌ಗೆ ಸರಾಸರಿ ನೀಡುವ ಮೈಲೇಜ್ ಈ ಕೆಳಗಿನಂತಿರುತ್ತದೆ.

| | | | |
|---|---|---|---|
| ಅ) | 09 ಕೆ.ಎಲ್ ನ 12 ಕೆ.ಎಲ್ ಟ್ಯಾಂಕರ್‌ಗೆ | : | 04 ಕಿ.ಮೀ. |
| ಆ) | 15 ಕೆ.ಎಲ್ ಟ್ಯಾಂಕರ್‌ಗೆ | : | 3.50 ಕಿ.ಮೀ. |

27ಎ. ಡೀಸೆಲ್ ದರದಲ್ಲಿನ ಇಳಿಮುಖ ನಿರಂತರವಾಗಿ ನೀಡುತ್ತಿರುವ ಸಾಗಾಣಿಕೆ ದರದಲ್ಲಿನ ಇಳಿಕೆಗೆ ಕಾರಣವಾಗಿರುತ್ತದೆ. ಹಾಲಿನ ಟ್ಯಾಂಕರ್ ವಾಹನಗಳಿಗೆ ಡೀಸೆಲ್ ದರ ಏರಿಕೆ/ಇಳಿಕೆಯಾದಲ್ಲಿ ಟ್ಯಾಂಕರ್‌ಗಳು ಸಾಗಾಣಿಕೆಗೆ ಕ್ರಮಿಸುವ ಅಂದಾಜು ಕಿ.ಮೀ. ಆಧಾರದ ಮೇಲೆ ಡೀಸೆಲ್ ದರವನ್ನು ಪರಿಗಣಿಸಿ ಸಾಗಾಣಿಕೆ ದರ ಪರಿಷ್ಕರಿಸಲಾಗುವುದು.

28. ದರಪಟ್ಟಿ ದಸ್ತಾವೇಜು ಆಹ್ವಾನಿಸಿದ ಸಂದರ್ಭದಲ್ಲಿ ಪ್ರಕಟವಾದ ಮಾರ್ಗದ ದೂರ ಕೇವಲ ತಾತ್ಕಾಲಿಕ ಹಾಗೂ ಗುತ್ತಿಗೆದಾರರ ಬಿಲ್ಲುಗಳನ್ನು ಪಾವತಿಸುವ ಕ್ರಮಕ್ಕಾಗಿ ನಮೂದಿಸಲಾಗಿದ್ದು, ಹಾಗಾಗಿ ಶಿವಮೊಗ್ಗ ಹಾಲು ಒಕ್ಕೂಟದ ಪ್ರತಿನಿಧಿಗಳು ಹಾಗೂ ಗುತ್ತಿಗೆದಾರನ ಪ್ರತಿನಿಧಿಗಳು ಕಿ.ಮೀ. ಪರಿಶೀಲನೆ (ದೂರ ಪರಿಶೀಲನೆ) ನಡೆಸಿ ನೀಡುವ ಖಚಿತ ದೂರದ ವಿವರವನ್ನು ಗುತ್ತಿಗೆದಾರ ಒಪ್ಪಿಕೊಳ್ಳತಕ್ಕದ್ದು.

29. ಶಿವಮೊಗ್ಗ ಹಾಲು ಒಕ್ಕೂಟವು ನಿರ್ದಿಷ್ಟಪಡಿಸಿದ ವೇಳೆಯಲ್ಲಿ, ಗುತ್ತಿಗೆದಾರ ವಾಹನಗಳನ್ನು ಪೂರೈಸತಕ್ಕದ್ದು. ಗುತ್ತಿಗೆದಾರನಿಗೆ ಅಲ್ಪಕಾಲೀನ ಸೂಚನೆ ನೀಡಿ ವೇಳೆ ಬದಲಿಸುವ ಹಕ್ಕು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಇರುತ್ತದೆ.

30. ಗಲಭೆಗಳಿಂದಾಗಿ ನಾಗರೀಕರ ಪ್ರತಿಭಟನೆ, ಕಾರ್ಮಿಕರ ಮುಷ್ಕರ/ಹೋರಾಟದಿಂದಾಗಿ ಅಥವಾ ಬಂದ್ ಸಮಯದಲ್ಲಿ, ಗುತ್ತಿಗೆದಾರನ ವಾಹನ ಜಖಂಗೊಂಡರೆ ಗುತ್ತಿಗೆದಾರ ಪರಿಹಾರ ಕೇಳುವ ಹಾಗಿಲ್ಲ. ಸಂಸ್ಥೆಯ ಒಳ ಆವರಣದಲ್ಲಿ ಅಥವಾ ಹೊರ ಆವರಣದಲ್ಲಿ ಹೊರಗಿನವರಿಂದಾಗಲೀ ಜಖಂ ಆಗಬಹುದು.

31. ಈ ಗುತ್ತಿಗೆಯಲ್ಲಿ ಗುತ್ತಿಗೆದಾರ ಅರಿತಿರಬೇಕಾದುದು ಈ ಅಂಶವನ್ನು ಹಾಲನ್ನು ನಿರಂತರವಾಗಿ ಯಾವುದೇ ಅಡೆತಡೆ ಇಲ್ಲದೆ ಸಾಗಾಣಿಕೆ ಮಾಡುತ್ತಿರಬೇಕು. ಕಾನೂನು ಸುವ್ಯವಸ್ಥೆಯ ಸಂದರ್ಭದಲ್ಲಾಗಲೀ, ಹವಾಮಾನ ವೈಪರೀತ್ಯದಿಂದಾಗಲೀ ಸರಬರಾಜಿನಲ್ಲಿ ವ್ಯತ್ಯಯವಾಗದಂತೆ ನಿಗದಿಪಡಿಸಿರುವ ಎಲ್ಲಾ ಮಾರ್ಗಗಳಲ್ಲಿ ನಿರಂತರವಾಗಿ ಸಾಗಾಣಿಕೆ ಆಗುತ್ತಿರಬೇಕು.

**ಟೆಂಡರ್‌ದಾರರ ಸಹಿ ಮತ್ತು ಹೆಸರು**

(ದಪ್ಪ ಅಕ್ಷರಗಳಲ್ಲಿ)

32. ಮಿಲಿಟರಿ ಹಾಗೂ ನಾಗರೀಕ ಅಧಿಕಾರವು ಕರ್ಫ್ಯೂ ವಿಧಿಸಿರುವ ಸಂದರ್ಭದಲ್ಲಿ ಯಾವುದೇ ನಿರ್ಬಂಧ ಹಾಕಿರುವ ಸಂದರ್ಭದಲ್ಲಿ ವಾಹನ ಓಡಾಟಕ್ಕೆ ನಿರ್ಬಂಧವನ್ನು ಹೊರಿಸಿರುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ಯಾರಿಂದ ವಾಹನ ಓಡಾಟಕ್ಕೆ ಅನುಮತಿ ಪಡೆಯಬೇಕೋ ಅಂತ ಅಧಿಕೃತ ಅಧಿಕಾರಿಗಳಿಂದ ಅನುಮತಿ ಪಡೆದು ವಾಹನ ಹಾಗೂ ಸಿಬ್ಬಂದಿಯ ಚಲನವಲನಕ್ಕೆ ಅವಕಾಶ ಕಲ್ಪಿಸಿಕೊಡುತ್ತದೆ.

33. ಗುತ್ತಿಗೆದಾರನ ನೌಕರ, ಪ್ರತಿನಿಧಿ ಸಾಗಾಣಿಕೆಗೆ ನೀಡಿರುವ ಹಾಲು ಮತ್ತು ಹಾಲಿನ ಉತ್ಪನ್ನವನ್ನು ಇತರೇ ವಸ್ತುಗಳನ್ನು ಕದಿಯುತ್ತಿದ್ದರೆ ಮತ್ತು ಹಾಳು ಮಾಡುತ್ತಿದ್ದರೆ ಅದು ಸಾಗಾಣಿಕೆ ಸಂದರ್ಭದಲ್ಲಿ ಭರ್ತಿಮಾಡುವ, ಇಳಿಸುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ಆವರಣದಲ್ಲಿಯೇ ಅಥವಾ ವಿತರಣಾ ಕೇಂದ್ರಗಳಲ್ಲಿ ಆಗುತ್ತಿದ್ದರೆ ಇದರಿಂದಾಗುವ ನಷ್ಟ ಹಾಗೂ ಹಾಳಾಗುವುದಕ್ಕೆ ಗುತ್ತಿಗೆದಾರನೇ ಹೊಣೆಯಾಗುತ್ತಾನೆ. ಹಾಗೂ ಆದ ನಷ್ಟವನ್ನು ಗುತ್ತಿಗೆದಾರ ಭರಿಸತಕ್ಕದ್ದು, ಇಲ್ಲವೇ ಶಿವಮೊಗ್ಗ ಹಾಲು ಒಕ್ಕೂಟ ತನ್ನ ವಿವೇಚನೆಗೆ ಸರಿಕಂಡುಬಂದರೆ ಗುತ್ತಿಗೆದಾರ ಇರಿಸಿರುವ ಇಡು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅಥವಾ ಗುತ್ತಿಗೆಯನ್ನೇ ವಜಾ ಮಾಡಬಹುದಾಗಿರುತ್ತದೆ ಅಥವಾ ಸೂಕ್ತ ದಂಡ ವಿಧಿಸಲಾಗುವುದು.

34. ಗುತ್ತಿಗೆದಾರನ ನೌಕರ/ಪ್ರತಿನಿಧಿ ಶಿವಮೊಗ್ಗ ಹಾಲು ಒಕ್ಕೂಟದ ಅಧಿಕಾರಿಗಳೊಂದಿಗೆ/ಸಂಘದ ಸಿಬ್ಬಂದಿಗಳೊಂದಿಗೆ ಅಥವಾ ಸಾರ್ವಜನಿಕರೊಂದಿಗೆ ತಪ್ಪಾಗಿ ನಡೆದುಕೊಂಡರೆ ಅಕ್ರಮ ವ್ಯವಹಾರಗಳಲ್ಲಿ ತೊಡಗಿದರೆ ಅಂತಹ ನೌಕರನನ್ನು ಸಾಗಾಣಿಕೆ ಕಾರ್ಯದಿಂದ ತೆಗೆದುಹಾಕಿ ಎಂದು ಶಿವಮೊಗ್ಗ ಹಾಲು ಒಕ್ಕೂಟವು ಸೂಚಿಸಬಹುದು. ಹಾಗೆ ಸೂಚಿಸಿದಾಗ ಗುತ್ತಿಗೆದಾರ ಅಂತಹ ಅನಪೇಕ್ಷಿತ ವ್ಯಕ್ತಿಯನ್ನು ಕೂಡಲೇ ಕೆಲಸದಿಂದ ತೆಗೆದುಹಾಕಬೇಕು. ಅವನನ್ನು ಶಿವಮೊಗ್ಗ ಹಾಲು ಒಕ್ಕೂಟದ ಇದೇ ಗುತ್ತಿಗೆದಾರರನಾಗಲೀ, ಇತರೇ ಗುತ್ತಿಗೆದಾರನಾಗಲೀ ಮತ್ತೆ ಕೆಲಸಕ್ಕೆ ನೇಮಕ ಮಾಡಿಕೊಳ್ಳಬಾರದು.

35. ನಿರ್ದಿಷ್ಟಪಡಿಸಿದ ವೇಳೆಯಲ್ಲಿ ಗುತ್ತಿಗೆದಾರ ಹಾಲನ್ನು ಸಾಗಾಣಿಕೆ ಮಾಡುವಲ್ಲಿ ವಿಫಲನಾದರೆ ಇದರಿಂದಾಗಿ ಹಾಲು ಹುಳಿ ಆಗಿ ಹಾಳಾಗುವು ಸಂಭವವಿರುತ್ತದೆ. ಆದ್ದರಿಂದ ಗುತ್ತಿಗೆದಾರರು ತಮಗೆ ವಹಿಸಿದ ಜವಾಬ್ದಾರಿಯನ್ನು ಸಮಯಕ್ಕೆ ಸರಿಯಾಗಿ ನಿಭಾಯಿಸತಕ್ಕದ್ದು.

36. ಗುತ್ತಿಗೆದಾರನ ವಾಹನ ಸಾಗಾಣಿಕೆ ಕಾರ್ಯಕ್ಕೆ ಶಿವಮೊಗ್ಗ ಹಾಲು ಒಕ್ಕೂಟದ ಆವರಣಕ್ಕೆ ಪ್ರವೇಶಿಸುವ, ನಿರ್ಗಮಿಸುವ, ಓಡಾಡುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ಕಟ್ಟಡದ ಆಸ್ತಿಗೆ ಹಾನಿಯಾಗದಂತೆ ಎಚ್ಚರವಹಿಸತಕ್ಕದ್ದು. ಹಾಗಲ್ಲದೆ ನಷ್ಟ ಉಂಟುಮಾಡಿದರೆ, ನಷ್ಟದ ಮೊತ್ತವನ್ನು ಅವರ ಬಿಲ್ಲಿನಲ್ಲಿ ಕಡಿತಮಾಡಿ ಅಥವಾ ಇತರ ಅಗತ್ಯ ಕ್ರಮದಿಂದ ವಸೂಲು ಮಾಡಲಾಗುವುದು.

37. ಗುತ್ತಿಗೆದಾರನ ವಾಹನ ಡೇರಿಯ ಆವರಣದಲ್ಲಿ ಅಥವಾ ಹೊರಗಡೆ ಅಪಘಾತಕ್ಕೆ ಗುರಿಯಾದರೆ ಆ ನಷ್ಟವನ್ನು ಶಿವಮೊಗ್ಗ ಹಾಲು ಒಕ್ಕೂಟದಿಂದ ಪರಿಹಾರವಾಗಿ ಪಡೆಯತಕ್ಕದ್ದಲ್ಲ. ಗುತ್ತಿಗೆದಾರ ಗುತ್ತಿಗೆ ಅವಧಿ/ಹೆಚ್ಚುವರಿ ಅವಧಿಯಲ್ಲಿ ಸಾಗಾಣಿಕೆ ಮಾಡುವ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೌಲ್ಯಕ್ಕೆ ವಿಮೆ ಮಾಡಿಸಿರಬೇಕು.

38. ಗುತ್ತಿಗೆದಾರನ ವಾಹನ ಶಿವಮೊಗ್ಗ ಹಾಲು ಒಕ್ಕೂಟದ ಆವರಣಕ್ಕೆ ಬರುವ ಹಾಗು ಹೊರ ಹೋಗುವ ಇಲ್ಲವೇ ಆವರಣದಲ್ಲಿರುವ ಅನುಮತಿಯುಳ್ಳ ವ್ಯಕ್ತಿಯನ್ನು ಗಾಯಗೊಳಿಸುವುದು ಅಥವಾ ಸಾವಿಗೆ ಕಾರಣವಾಗದಂತೆ ಎಚ್ಚರಿಕೆ ವಹಿಸತಕ್ಕದ್ದು.

39. ಶಿವಮೊಗ್ಗ ಹಾಲು ಒಕ್ಕೂಟದ ಸಿಬ್ಬಂದಿಗೆ/ ಅನುಮತಿಯುಳ್ಳ ವ್ಯಕ್ತಿಗೆ ಉಂಟಾಗಬಹುದಾದ ಗಾಯ, ಅದರಿಂದ ಡೇರಿಯ ನೌಕರರ ಪರಿಹಾರ ನೀಡಿಕೆ ನಿಯಮದಡಿ ಇತರೆ ಯಾವುದೇ ಕಾನೂನಿನಡಿ ಜಾರಿಯಲ್ಲಿರುವ ನಿಬಂಧನೆ ಅಧಿನಿಯಮದಡಿ ಪರಿಹಾರ ಧನವನ್ನು ಗುತ್ತಿಗೆದಾರ ಭರಿಸತಕ್ಕದ್ದು.

40. ಈ ಗುತ್ತಿಗೆಯಡಿ ತನಗೆ ದತ್ತವಾಗಿರುವ ಹಕ್ಕು ಬಾಧ್ಯತೆಯನ್ನು ಇತರ ವ್ಯಕ್ತಿಗೆ ವಹಿಸಿಕೊಡತಕ್ಕದ್ದಲ್ಲ.

41. ಈ ಗುತ್ತಿಗೆಯಡಿ ಆತನಿಗೆ ವಹಿಸಿರುವ ಸಾಗಾಣಿಕೆ ಕಾಮಗಾರಿಯನ್ನು ನಿರ್ವಹಿಸಲು ವಿಫಲನಾದಲ್ಲಿ ಅಥವಾ ಸಾಗಾಣಿಕೆಯ ಪೂರ್ಣ ಕಾರ್ಯವನ್ನು ಕೈಗೊಳ್ಳದಿದ್ದಲ್ಲಿ ಅಥವಾ ಭಾಗಶಃ ನಿರ್ವಹಿಸದಿದ್ದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ವಿಧಿಸಿರುವ ನಿಯಮ ನಿಬಂಧನೆಯಡಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಬಹುದಾಗಿದೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**

(ದಪ್ಪ ಅಕ್ಷರಗಳಲ್ಲಿ)

ಎ) ಗುತ್ತಿಗೆಯನ್ನು ವಜಾ ಮಾಡಬಹುದು ಅಥವಾ ಯಾವುದೇ ಭಾಗದ ಕಾರ್ಯವನ್ನು ಅಥವಾ

ಬಿ) ಆಧಾರ ಮೊತ್ತವನ್ನು ಪೂರ್ಣ ಮುಟ್ಟುಗೋಲು ಅಥವಾ ಶಿವಮೊಗ್ಗ ಹಾಲು ಒಕ್ಕೂಟ ದಿಂದ ಉಂಟಾದ ನಷ್ಟದ ಪ್ರಮಾಣಕ್ಕೆ ಸರಿದೂಗಿಸುವಷ್ಟು ಹಾಗೂ ಅಥವಾ

ಸಿ) ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾದ ನಷ್ಟದ ಪ್ರಮಾಣವನ್ನು ಪಾವತಿಸುವಂತೆ ಗುತ್ತಿಗೆದಾರರಿಗೆ ಸೂಚಿಸುವುದು.

ಡಿ) ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾದ ನಷ್ಟವನ್ನು ಗುತ್ತಿಗೆದಾರರು ಬೇರೆ ಮಾರ್ಗದಲ್ಲಿ ವಾಹನ ಒದಗಿಸಿದ್ದರೆ ಅದರಿಂದ ಸರಿದೂಗಿಸಿಕೊಳ್ಳಲಾಗುವುದು.

ಇ) ಈ ಕಾರಣದಿಂದಾಗಿ ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾದ ಹೆಚ್ಚುವರಿ ವೆಚ್ಚವನ್ನು ಹಾಗೂ ಇಂತಹ ಸೇವೆಯನ್ನು ಇತರರಿಂದ ಪಡೆದುದಕ್ಕಾಗಿ ಆದ ಹೆಚ್ಚುವರಿ ವೆಚ್ಚದ ಮೊತ್ತವನ್ನು ಗುತ್ತಿಗೆದಾರನಿಂದ ಪಡೆಯತಕ್ಕದ್ದು.

ಎಫ್) **ಬಿ.ಎಂ.ಸಿ. ಕೇಂದ್ರದಿಂದ ಹಾಲನ್ನು ಟ್ಯಾಂಕರ್‌ಗೆ ತುಂಬಿಸಿಕೊಳ್ಳುವ ಮುನ್ನ ಹಾಲಿನ ಗುಣಮಟ್ಟ ಮತ್ತು ಅಳತೆಯನ್ನು ಕಡ್ಡಾಯವಾಗಿ ಪರೀಕ್ಷಿಸಿಕೊಂಡು ಬಿ.ಎಂ.ಸಿ. ಕೇಂದ್ರದವರು ನೀಡುವ ಡೆಲಿವರಿ ಚಲನ್/ಗೇಟ್ ಪಾಸ್‌ಗೆ ತಾಳೆ ಮಾಡಿಕೊಳ್ಳತಕ್ಕದ್ದು. ಡೇರಿ/ಶೀತಲೀಕರಣ ಕೇಂದ್ರದಲ್ಲಿ ಬಿ.ಎಂ.ಸಿ. ಕೇಂದ್ರ ರವಾನಿಸುವ ಹಾಲಿಗೂ, ಸ್ವೀಕರಿಸುವ ಹಾಲಿಗೂ ತೂಕ/ಗುಣಮಟ್ಟದಲ್ಲಿ ವ್ಯತ್ಯಾಸವಿದ್ದಲ್ಲಿ ಗುತ್ತಿಗೆದಾರರ ಬಿಲ್ಲಿನಲ್ಲಿ ನಿಯಾಮನುಸಾರ ಕಟಾಯಿಸಲಾಗುವುದು.**

ಜಿ) ಒಕ್ಕೂಟದ ವ್ಯಾಪ್ತಿಯಲ್ಲಿನ ಎಲ್ಲಾ ಬಿ.ಎಂ.ಸಿ. ಟ್ಯಾಂಕರ್‌ಗಳಿಗೆ ಕಡ್ಡಾಯವಾಗಿ GPS ಅಳವಡಿಸಲು ಯೋಜಿಸಲಾಗಿದ್ದು, ಒಕ್ಕೂಟವು ಸೂಚಿಸಿದ ಮಾದರಿಯ GPS ಯಂತ್ರವನ್ನು ಸ್ವಂತ ಖರ್ಚಿನಲ್ಲಿ ಖರೀದಿಸಿ ಅಳವಡಿಸಲು ಇಚ್ಛೆಯುಳ್ಳ ಟೆಂಡರ್‌ದಾರರು ಮಾತ್ರ ಟೆಂಡರ್ ಅರ್ಜಿ ಸಲ್ಲಿಸಬಹುದು. ಕಚೇರಿಯಿಂದ ಆದೇಶಿಸಿದಲ್ಲಿ GPS ಅಳವಡಿಸಲು ಮತ್ತು ಅದಕ್ಕೆ ಕರೆನ್ಸಿ ಹಾಕಿಸಲು ಬದ್ದರಾಗಿರಬೇಕು. ಅಥವಾ ಒಕ್ಕೂಟದಿಂದ ಜಿ.ಪಿ.ಎಸ್. ಅಳವಡಿಸಿದಲ್ಲಿ ಅದರ ಮೊತ್ತವನ್ನು ಸಾರಿಗೆ ಬಿಲ್ಲಿನಲ್ಲಿ ಕಟಾಯಿಸಲಾಗುವುದು.

42. ಬಿ.ಎಂ.ಸಿ./ಡೇರಿ ಡಾಕ್ ಬಿಡುವ ಮುನ್ನ ಟ್ಯಾಂಕರ್‌ಗಳ ಬಾಗಿಲುಗಳನ್ನು ಬಿಗಿಯಾಗಿ ಹಾಕಿಕೊಳ್ಳತಕ್ಕದ್ದು ತಪ್ಪಿದ್ದಲ್ಲಿ ಸೋರಿಕೆಯಾದ ಹಾಲಿನ ನಷ್ಟಕ್ಕೆ ಗುತ್ತಿಗೆದಾರರನ್ನೆ ಹೊಣೆಗಾರರನ್ನಾಗಿ ಮಾಡಲಾಗುವುದು. ಈ ರೀತಿಯ ನಷ್ಟದ ಮೊತ್ತವನ್ನು ಗುತ್ತಿಗೆದಾರರ ಸಾಗಾಣಿಕೆ ಹುಂಡಿಯಿಂದ ವಸೂಲಿ ಮಾಡಲು ಕ್ರಮಕೈಗೊಳ್ಳುವುದು.

43. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಅಕಾಲ ಮರಣಹೊಂದಿದಲ್ಲಿ ಸಾಗಾಣಿಕೆ ಗುತ್ತಿಗೆಯನ್ನು ಅವರ ವಾರಸುದಾರರಿಗೆ ಮುಂದುವರೆಸುವ ಅಥವಾ ನೀಡದಿರುವ ಹಕ್ಕು ವ್ಯವಸ್ಥಾಪಕ ನಿರ್ದೇಶಕರಿಗೆ ಕಾಯ್ದಿರಿಸಲಾಗಿದೆ. ಹಾಗು ಅಂತಹ ಸಂದರ್ಭಗಳಲ್ಲಿ ಅವರಿಗೆ ಡೇರಿಯ ವತಿಯಿಂದ ಪಾವತಿಸುವ ಹಣವೇನಾದರೂ ಇದ್ದಲ್ಲಿ ಇದನ್ನು ಕಾನೂನು ರೀತಿ ನಿಯಮಾನುಸಾರ ಪರಿಶೀಲಿಸಿ ಬಿಡುಗಡೆಗೊಳಿಸುವ ಅಧಿಕಾರವು ವ್ಯವಸ್ಥಾಪಕ ನಿರ್ದೇಶಕರು ಶಿವಮೊಗ್ಗ ಹಾಲು ಒಕ್ಕೂಟದ ವಿವೇಚನೆಗೆ ಒಳಪಟ್ಟಿರುತ್ತದೆ.

44. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಯಾವುದೇ ಅಪರಾಧ / ಕಾನೂನು ಉಲ್ಲಂಘನೆಗಳಲ್ಲಿ ಭಾಗಿಯಾಗಿರುವುದು ಕಂಡು ಬಂದಲ್ಲಿ ಇಂತವರ ಮೇಲೆ ಆರಕ್ಷಕ ಠಾಣೆ / ನ್ಯಾಯಾಲಯದಲ್ಲಿ ಮೊಕದ್ದಮೆಗಳೇನಾದರೂ ಇರುವುದು ಕಂಡುಬಂದಲ್ಲಿ ಇಂತಹ ಗುತ್ತಿಗೆದಾರರ ಗುತ್ತಿಗೆಯನ್ನು ಯಾವುದೇ ಮುನ್ಸೂಚನೆ ನೀಡದೆ ರದ್ದುಪಡಿಸುವ ಅಧಿಕಾರವು ವ್ಯವಸ್ಥಾಪಕ ನಿರ್ದೇಶಕರು ಶಿವಮೊಗ್ಗ ಹಾಲು ಒಕ್ಕೂಟ ಕಾಯ್ದಿರಿಸಲಾಗಿದೆ. ಮತ್ತು ಅಂತಹವರ ಇಡುಗಂಟನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

45. ಗುತ್ತಿಗೆಯ ವಾಹನ ಚಾಲಕರು/ಸಿಬ್ಬಂದಿಗಳು ಡೇರಿಯ ಆವರಣದೊಳಗಡೆ ಟೇಪ್‌ರಿಕಾರ್ಡರ್ / ಐ ಪಾಡ್ /ಹಾರ್ನ್ / ಮೊಬೈಲ್, ದೂರವಾಣಿ / ತಂಬಾಕು ವಗೈರೆ ಉಪಯೋಗಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಈ ಎರಡು ನಿಯಮವನ್ನು ಉಲ್ಲಂಘಿಸುವುದು ಕಂಡು ಬಂದಲ್ಲಿ ಸೂಕ್ತ ದಂಡ ವಿಧಿಸಲಾಗುವುದಲ್ಲದೆ ಡೇರಿಯ ನಿಯಮಗಳಂತೆ ಕ್ರಮ ಜರುಗಿಸಲಾಗುವುದು.

46. ಗುತ್ತಿಗೆ ಅವಧಿಯಲ್ಲಿ ಗುತ್ತಿಗೆದಾರರು ನೀಡಿರುವ ವಾಹನಕ್ಕೆ ಸಂಘಗಳ ಮಾಹಿತಿಗಾಗಿ ಗುರುತಿಗಾಗಿ ನಂದಿನಿ ಉತ್ಪನ್ನಗಳ ಜಾಹೀರಾತನ್ನು ಗುತ್ತಿಗೆ ವಾಹನಗಳಿಗೆ ಡೇರಿಯ ವತಿಯಿಂದ ಬರೆಸಲಾಗುವುದು. ಸದರಿ ಜಾಹೀರಾತನ್ನು ಗುತ್ತಿಗೆ ಅವಧಿಯವರೆವಿಗೂ ಕಾಪಾಡುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಗುತ್ತಿಗೆದಾರರ ಅಜಾಗರೂಕತೆಯಿಂದ ಜಾಹೀರಾತುಗಳು ಹಾಳಾದಲ್ಲಿ ಪುನಃ ಬರೆಸುವ ವೆಚ್ಚವನ್ನು ಸಾರಿಗೆ ಬಿಲ್ಲಿನಿಂದ ವಸೂಲಿ ಮಾಡಲು ಕ್ರಮ ಜರುಗಿಸಲಾಗುವುದು.

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

ದಂಡ ಃ ಗುತ್ತಿಗೆದಾರನ ಕರ್ತವ್ಯ ಚ್ಯುತಿಗೆ ವಿಧಿಸಲಾಗಿರುವ ದಂಡ ಕೆಳಕಂಡಂತಿದೆ.

| ಕ್ರ. ಸಂ. | ಕರ್ತವ್ಯ ಚ್ಯುತಿ | ಮೊದಲ ಕರ್ತವ್ಯ ಚ್ಯುತಿಗೆ | ನಂತರದ ಪ್ರತಿ ಕರ್ತವ್ಯ ಚ್ಯುತಿಗೆ |
|---|---|---|---|
| 01 | ವಾಹನಕ್ಕೆ ನಿರ್ದಿಷ್ಟ ಬಣ್ಣ ಬಳಿಯುವ ಕಾರಣಕ್ಕೆ | ರೂ.100.00 | ರೂ.200.00 |
| 02 | ವಾಹನ ಕೆಟ್ಟುನಿಂತ ಕಾರಣ ಹಾಲನ್ನು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಸಕಾಲದಲ್ಲಿ/ನಿರ್ದಿಷ್ಟ ಅವಧಿಯಲ್ಲಿ ಸಾಗಾಣಿಕೆ ಮಾಡದಿದ್ದಲ್ಲಿ | ರೂ. 2000.00 | ರೂ. 4000.00 |
| 03 | ವಾಹನ ಕೆಟ್ಟು ನಿಂತ ಕಾರಣ ಹಾಲು ಸಂಪೂರ್ಣ ಹುಳಿಯಾಗಿ ಹಾಳಾದಲ್ಲಿ | ಹಾಲಿನ ಸಂಪೂರ್ಣ ಮೊತ್ತ | ಹಾಲಿನ ಸಂಪೂರ್ಣ ಮೊತ್ತ ಮತ್ತು 2000.00 |
| 04 | ಹೊರಡಲು ತೊಂದರೆ | ಆರಂಭದ 15 ನಿಮಿಷ ತಡವಾದುದಕ್ಕೆ ರೂ. 100/- ಶಿವಮೊಗ್ಗ ಹಾಲು ಒಕ್ಕೂಟದಲ್ಲಿ ಹಾಲು ಅನ್‌ಲೋಡ್ ಆದ ಮೇಲೂ ಆವರಣ ಬಿಡದ ಕಾರಣ ನಂತರ ಪ್ರತಿ 10 ನಿಮಿಷಕ್ಕೆ ಭಾಗಶಃ ತಲಾ 20/- ರೂ ನಂತೆ | |
| 05 | ಸರಿಯಾದ ಸಮಯಕ್ಕೆ ವಾಹನ ನೀಡದ ಕಾರಣ | ಆರಂಭದ 15 ನಿಮಿಷಕ್ಕೆ ರೂ. 50/- ನಂತರದ ಪ್ರತಿ 10 ನಿಮಿಷ ಹಾಗೂ ಭಾಗಶಃ ತಲಾ 100/- ರೂ ನಂತೆ | |
| 06 | ಸ್ವಯಂ ಚಾಲನೆ ಇಲ್ಲದ ಕಾರಣ | ಆರಂಭದಲ್ಲಿ 3 ದಿನಗಳ ವಾಯಿದೆ ನೀಡಿ ಅಷ್ಟರಲ್ಲಿ ಸ್ವಯಂ ಚಾಲಕವನ್ನು ಅಳವಡಿಸಿಕೊಳ್ಳಲು ತಿಳುವಳಿಕೆ, ನಿಗಧಿತ ಅವಧಿಯಲ್ಲಿ ಅಳವಡಿಸದಿದ್ದರೆ ಪ್ರತಿ ದಿನ 100/- ರೂ. ದಂಡ ಅಳವಡಿಸುವವರೆಗೂ | |

47. ದಿನನಿತ್ಯದ ವಾಹನ ಕೆಟ್ಟು ನಿಂತಾಗ ಅಪಘಾತ ಆದಾಗ ಇತರೆ ಅನಿರೀಕ್ಷಿತ ಸಂದರ್ಭ ಒದಗಿ ಬಂದಾಗ ಬದಲಿ ವಾಹನವನ್ನು ಗುತ್ತಿಗೆದಾರ ಒದಗಿಸಿದಾಗ, 42 ರ ನಿಯಮದಡಿ ಹಾಗೂ ಉಪನಿಯಮ 1,2,3 ರ ಅಡಿಯಲ್ಲಿ ದಂಡವನ್ನು ವಿಧಿಸಲಾಗುವುದಿಲ್ಲ. ಬದಲಿ ವಾಹನವನ್ನು ಒದಗಿಸಿದ್ದರೂ ಉಳಿದ ಉಪನಿಬಂಧನೆ 4 ರಿಂದ 8 ರ ಅಡಿಯಲ್ಲಿ ಕ್ರಮ ಜರುಗಿಸಲಾಗುವುದು.

51. ಗುತ್ತಿಗೆ ಅವಧಿಯಲ್ಲಿ ಬಿ.ಎಂ.ಸಿ. ಹಾಲು ಶೇಖರಣಾ ಕಾರ್ಯಕ್ಕೆ ಯಾವುದೇ ದಿನ ವಾಹನವನ್ನು ಒದಗಿಸುವಲ್ಲಿ ವಿಫಲವಾದರೆ, ಶಿವಮೊಗ್ಗ ಹಾಲು ಒಕ್ಕೂಟವು ಅಂದಿನ ಕಾರ್ಯಕ್ಕೆ ಮಾಡಿದ ಸಾರಿಗೆ ವೆಚ್ಚ ಹಾಗೂ ಪ್ರತಿ ಟ್ರಿಪ್‌ಗೆ ತಲಾ ರೂ. 1000.00 ರಂತೆ ದಂಡ ವಿಧಿಸಲಾಗುವುದು.

52. ಗುತ್ತಿಗೆದಾರರ ವಾಹನಗಳನ್ನು ಪರಿಶೋಧಿಸಿದಾಗ, ವಾಹನದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳು, ಕ್ರೇಟುಗಳು, ಕ್ಯಾನುಗಳು ಅಥವಾ ಡೇರಿಗೆ ಸಂಬಂಧಿಸಿದ ವಸ್ತುಗಳು ಅನಧಿಕೃತವಾಗಿ ರವಾನೆಯಾಗುತ್ತಿದ್ದಲ್ಲಿ, ಅದನ್ನು ವಶಪಡಿಸಿಕೊಂಡು ದಂಡ ವಿಧಿಸಲಾಗುವುದು. ಇಂತಹ ತಪ್ಪುಗಳು ಪುನರಾವರ್ತನೆಯಾದಲ್ಲಿ ಹೆಚ್ಚಿನ ದಂಡ ವಿಧಿಸಲಾಗುವುದಲ್ಲದೆ ದಂಡದ ಜೊತೆಗೆ ಗುತ್ತಿಗೆಯನ್ನು ರದ್ದುಪಡಿಸಲಾಗುವುದು.

53. ಚಾಲಕನಿಗೆ /ಲೋಡರ್‌ಗಳಿಗೆ ಡೇರಿಯೊಳಗೆ ಪ್ರವೇಶ ಅನುಮತಿ ಪತ್ರ ನೀಡುವ ಸಲುವಾಗಿ ಚಾಲಕನ /ಲೋಡರ್‌ಗಳ ಪಾಸ್ ಪೋರ್ಟ್ ಅಳತೆಯ ಎರಡು ಭಾವ ಚಿತ್ರಗಳು, ಹೆಸರು, ವಿಳಾಸವನ್ನು ಹೊಂದಿರುವ ಗುರುತಿನ ಚೀಟಿ ಗುತ್ತಿಗೆದಾರರು ನೀಡತಕ್ಕದ್ದು.

**ಟೆಂಡರ್‌ದಾರರ ಸಹಿ ಮತ್ತು ಹೆಸರು**

(ದಪ್ಪ ಅಕ್ಷರಗಳಲ್ಲಿ)

54. ಅಂತಿಮ ಹಣ ಪಾವತಿ ಮುನ್ನ ಇತ್ತೀಚಿನ ವರಮಾನ ತೆರಿಗೆ ಪ್ರಮಾಣ ಪತ್ರ/ವೃತ್ತಿ ತೆರಿಗೆ ಪ್ರಮಾಣ ಪತ್ರ ಒದಗಿಸತಕ್ಕದ್ದು.

55. ಗುತ್ತಿಗೆದಾರರು ವೃತ್ತಿ ತೆರಿಗೆ ನೋಂದಣಿ ಮಾಡಿಸಿ ಸರ್ಕಾರವು ನಿಗಧಿಪಡಿಸಿರುವ ವೃತ್ತಿ ತೆರಿಗೆಯನ್ನು ಸರ್ಕಾರಕ್ಕೆ ಪಾವತಿ ಮಾಡಿರಬೇಕು. ತಪ್ಪಿದ್ದಲ್ಲಿ ಸರ್ಕಾರದಿಂದ ನಿಗದಿಪಡಿಸಿರುವ ವೃತ್ತಿ ತೆರಿಗೆಯನ್ನು ಸಾರಿಗೆ ಗುತ್ತಿಗೆದಾರರ ಬಿಲ್ಲಿನಲ್ಲಿ ಕಠಾಯಿಸಿ ಸರ್ಕಾರಕ್ಕೆ ಪಾವತಿಸಲಾಗುವುದು.

56. ಗುತ್ತಿಗೆದಾರ ನಿಯಮ ನಿಬಂಧನೆಗೆ ಭಂಗ ತಂದಿದ್ದೇ ಆದರೆ, ಗುತ್ತಿಗೆ ರದ್ದಾಗುತ್ತದೆಂದು ಅರಿತವನಾಗಿರಬೇಕು. ನಿಬಂಧನೆ ಭಂಗದಿಂದಾಗಿ ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾಗಬಹುದಾದ ನಷ್ಟವನ್ನು ಭರಿಸುವ ಮತ್ತು ಶಿವಮೊಗ್ಗ ಹಾಲು ಒಕ್ಕೂಟವು ಆಧಾರ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದರ ಬಗ್ಗೆ ಗುತ್ತಿಗೆದಾರ ಅರಿತವನಾಗಿರಬೇಕು.

57. ಗುತ್ತಿಗೆದಾರರು ಪ್ರತಿ ತಿಂಗಳು ತಮ್ಮ ಗುತ್ತಿಗೆ ಹಣ ಪಡೆಯುವ ಸಲುವಾಗಿ ಕೆನರಾ ಬ್ಯಾಂಕ್/ಎಸ್.ಬಿ.ಐ. ಯಾವುದೇ ಶಾಖೆಯ ಬ್ಯಾಂಕಿನಲ್ಲಿ ಖಾತೆ ಉಳ್ಳವರಾಗಿರಬೇಕು ಹಾಗೂ ಪಾನ್ ಕಾರ್ಡ್ ಹೊಂದಿದ್ದು, ಬಿಲ್‌ನ ಮೇಲೆ ಪಾನ್ ನಂ. ನಮೂದಿಸತಕ್ಕದ್ದು.

58. ಈ ಗುತ್ತಿಗೆಯಿಂದ ಎದುರಾಗಬಹುದಾದ ಎಲ್ಲಾ ವಿವಾದಗಳನ್ನು ವ್ಯವಸ್ಥಾಪಕ ನಿರ್ದೇಶಕರು ಶಿವಮೊಗ್ಗ ಹಾಲು ಒಕ್ಕೂಟರವರ ಗಮನಕ್ಕೆ ತರತಕ್ಕದ್ದು ಅವರೇ ಈ ಸಮಸ್ಯೆಯ ಇತ್ಯರ್ಥದ ಬಗ್ಗೆ ಪರಮಾಧಿಕಾರ ಉಳ್ಳವರಾಗಿದ್ದ ಅವರ ನಿರ್ಧಾರವೇ ಅಂತಿಮವಾದುದೂ ಆಗಿದೆ. ಒಂದು ವೇಳೆ ಸಮಸ್ಯೆಯು ಬಗೆಹರಿಯದೆ ಇದ್ದಲ್ಲಿ ಈ ಗುತ್ತಿಗೆದಾರರ ಎದುರಾಗಬಹುದಾದ ಎಲ್ಲಾ ವಿವಾದಗಳನ್ನು ಶಿವಮೊಗ್ಗ ವ್ಯಾಪ್ತಿಯ ನ್ಯಾಯಾಲಯದಲ್ಲಿಯೆ ಬಗೆಹರಿಸತಕ್ಕದ್ದು.

59. ಮೇಲಿನ ನಿಯಮಗಳಿಗೆ ಇತರೆ ನಿಯಮಗಳನ್ನು ಸೇರಿಸುವ ಅಥವಾ ಕಳೆಯುವ ಮತ್ತು ವ್ಯತ್ಯಯಗೊಳಿಸುವ ಅಧಿಕಾರವನ್ನು ಶಿವಮೊಗ್ಗ ಹಾಲು ಒಕ್ಕೂಟವು ಕಾಯ್ದಿರಿಸಿಕೊಂಡಿದೆ.

60. ಯಾವುದೇ ಗುತ್ತಿಗೆದಾರರು ಸಕಾರಣದಿಂದ ಗುತ್ತಿಗೆಯನ್ನು ರದ್ದುಗೊಳಿಸಲು ಇಚ್ಛಿಸಿದಲ್ಲಿ ಸದರಿಯವರು 65 ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಡೇರಿಗೆ ತಿಳಿಸತಕ್ಕದ್ದು, ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಸದರಿ ಮನವಿಯನ್ನು ಪರಿಗಣಿಸಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಗುತ್ತಿಗೆಯನ್ನು ರದ್ದುಗೊಳಿಸುವ ಅಧಿಕಾರ ಹೊಂದಿರುತ್ತಾರೆ.

61. ಗುತ್ತಿಗೆದಾರರು ನಿಯಮ ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ರದ್ದು ಮಾಡಲು ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಅಧಿಕಾರ ಉಳ್ಳವರಾಗಿರುತ್ತಾರೆ. ಗುತ್ತಿಗೆ ರದ್ದುಪಡಿಸಿದಲ್ಲಿ ಆಗುವ ನಷ್ಟಕ್ಕೆ ಗುತ್ತಿಗೆದಾರನೇ ಜವಾಬ್ದಾರನಾಗಿದ್ದು ಅದನ್ನು ವಸೂಲಿ ಮಾಡುವ/ ಸರಿಪಡಿಸುವ ಅಧಿಕಾರ ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ ಹಾಲು ಒಕ್ಕೂಟರವರಿಗೆ ಇರುತ್ತದೆ.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

## ಚೆಕ್ ಲಿಸ್ಟ್
## ವಾಹನ ದಾಖಲಾತಿಗಳ ಮತ್ತು ಇತರೆ ವಿವರ

ಟೆಂಡರ್‌ದಾರರ ಹೆಸರು :

ಮಾರ್ಗದ ಹೆಸರು : ಮಾರ್ಗದ ಸಂಖ್ಯೆ:

| ಕ್ರ.ಸಂ | ವಿವರ | ದಾಖಲಾತಿಗಳಲ್ಲಿನ ವಿವರ | | ಷರಾ |
|---|---|---|---|---|
| 1 | ವಾಹನ ಮಾಲೀಕರ ಹೆಸರು (ಆರ್.ಸಿ. ಬುಕ್‌ನಲ್ಲಿರುವಂತೆ) | | | |
| 2 | ವಾಹನ ನೊಂದಣಿ ಸಂಖ್ಯೆ | | | |
| 3 | ನೊಂದಣಿ ದಿನಾಂಕ/ಮಾದರಿ | | | |
| 4 | ಎಫ್.ಸಿ. ಅವಧಿ | ದಿನಾಂಕ--------- ರಿಂದ | --------- ವರೆಗೆ | |
| 5 | ವಿಮಾ ಅವಧಿ | ದಿನಾಂಕ--------- ರಿಂದ | --------- ವರೆಗೆ | |
| 6 | ಪರಮಿಟ್ ಅವಧಿ | ದಿನಾಂಕ--------- ರಿಂದ | --------- ವರೆಗೆ | |
| 7 | ಟ್ಯಾಕ್ಸ್ ಅವಧಿ | ದಿನಾಂಕ--------- ರಿಂದ | --------- ವರೆಗೆ | |
| 8 | ಟ್ಯಾಂಕರ್ ಸಾಮರ್ಥ್ಯ (ಆರ್.ಸಿ. ಬುಕ್‌ನಲ್ಲಿರುವಂತೆ) | | | |
| 9 | ಇನ್ಸೂಲೇಟೆಡ್ ಟ್ಯಾಂಕರ್‌ಗಳಲ್ಲಿ ಹಾಲು ಸಾಗಾಣಿಕೆ ಮಾಡುವ ಸಂಬಂಧ ನೀಡಲಾಗುವ **ಎಫ್.ಎಸ್.ಎಸ್.ಎ.ಐ ಲೈಸೆನ್ಸ್** ಪ್ರತಿಯನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡತಕ್ಕದ್ದು. **(Kind of Business ನಲ್ಲಿ Transport: Transporter (having a number of specialised vehicles like insulated refrigerated van/ wagon, milk tankers etc)** ಎಫ್.ಎಸ್.ಎಸ್.ಎ.ಐ ಲೈಸೆನ್ಸ್ ನಲ್ಲಿ ಟ್ಯಾಂಕರ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿರಬೇಕು. | | | |
| 10 | ಎಮಿಷನ್ ಪ್ರಮಾಣ ಪತ್ರ | | | |
| 11 | ಕಹಾಮ ಘಟಕ/ಒಕ್ಕೂಟಗಳಲ್ಲಿ ಕನಿಷ್ಠ 2 ವರ್ಷಗಳ ಟ್ಯಾಂಕರ್ ಸೇವೆ ಸಲ್ಲಿಸಿರುವ ಅನುಭವದೊಂದಿಗೆ ಸೇವೆ ತೃಪ್ತಿಕರವಾಗಿರುವ ಬಗ್ಗೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಟೆಂಡರ್‌ನಲ್ಲಿ ಸಲ್ಲಿಸುವುದು. | | | |
| 12 | ಟೆಂಡರ್ ಅರ್ಜಿ ಸಲ್ಲಿಸಿರುವ ಟ್ಯಾಂಕರ್ ಮಾರ್ಗದ ಹೆಸರು ಮತ್ತು ಸಂಖ್ಯೆ | | | |

(ಪ್ರತಿ ಮಾರ್ಗಕ್ಕೆ ವಾಹನವಾರು ದಾಖಲಾತಿ ವಿವರಗಳನ್ನು ಪ್ರತ್ಯೇಕವಾಗಿ ಲಗತ್ತಿಸತಕ್ಕದ್ದು.)

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

ಹಾಲಿನ ಸಾಗಾಣಿಕೆ ಟ್ಯಾಂಕರ್‌ಗೆ ಸಂಬಂಧಿಸಿದ ಮೇಲೆ ನಮೂದಿಸಿರುವ ಮಾಹಿತಿಗಳು ಸತ್ಯಪೂರ್ಣವಾಗಿದ್ದು ವಾಹನದ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದ್ದು, ಸದರಿ ವಾಹನವು ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಿದ ಮಾರ್ಗವನ್ನು ಹೊರತುಪಡಿಸಿ ಉಳಿದ ಯಾವುದೇ ಒಕ್ಕೂಟದಲ್ಲಿ ಅವಧಿ ಮುಗಿಯದೆ ಇರುವ ಟ್ಯಾಂಕರ್ ಮಾರ್ಗಗಳಲ್ಲಿ ಚಲಿಸುತ್ತಿರುವುದಿಲ್ಲ ಎಂದು ದೃಢೀಕರಿಸಿ ಮೂಲ ದಾಖಲಾತಿಗಳನ್ನು ಪರಿಶೀಲಿಸಲು ಇಚ್ಛಿಸಿದ್ದಲ್ಲಿ ನೀಡಲು ಬದ್ಧನಾಗಿರುತ್ತೇನೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

# ಸಾರಿಗೆದಾರರ ಪೂರ್ಣ ಮಾಹಿತಿ

1 ಸಾರಿಗೆದಾರರ ಹೆಸರು :

2 ವಿಳಾಸ ದೂರವಾಣಿ ಸಂಖ್ಯೆ / ಮೊಬೈಲ್ ಸಂಖ್ಯೆ :

3 ನೀವು ಕಂಪನಿ ಪಾಲುದಾರರಾಗಿದ್ದಲ್ಲಿ ಅದರ ಪೂರ್ಣ ಮಾಹಿತಿ :

4. ಸಾರಿಗೆ ಕಾರ್ಯ ಪ್ರಾರಂಭಿಸಿದ ವರ್ಷ ನೀವು ವ್ಯವಹರಿಸುವ ಬ್ಯಾಂಕಿನ ವಿಳಾಸ ಮತ್ತು ಖಾತೆ ಸಂಖ್ಯೆ :

5. ನಿಮ್ಮ ಹೆಸರಿನಲ್ಲಿ ಅಥವಾ ಕಂಪನಿ ಹೆಸರಿನಲ್ಲಿ ಹೊಂದಿರುವ ವಾಹನಗಳ ಸಂಖ್ಯೆ :

6. ಗುತ್ತಿಗೆ ನಿರ್ವಹಿಸಲು ಇಚ್ಛಿಸುವ ಮಾರ್ಗದ ಹೆಸರು/ ಸಂಖ್ಯೆ :

7. ಮಾರ್ಗಕ್ಕೆ ಒದಗಿಸುವ ವಾಹನ ಸಂಖ್ಯೆ ಮತ್ತು ದಾಖಲಾತಿ ಪ್ರತಿಗಳು :

ಆರ್.ಸಿ. ಇನ್ಸೂರೆನ್ಸ್, ಸಾಮರ್ಥ್ಯ, ತೆರಿಗೆ ಮುಂತಾದ ಇತ್ಯಾದಿ ಎಲ್ಲಾ ದಾಖಲಾತಿಗಳನ್ನು ಲಗತ್ತಿಸತಕ್ಕದ್ದು. :

8. ಈ ಕೆಳಗಿನ ದಾಖಲಾತಿಗಳನ್ನು ಲಗತ್ತಿಸುವುದು :

ಎ) ಆದಾಯ ತೆರಿಗೆ ಪ್ರಮಾಣ ಪತ್ರ
ಬಿ) ವೃತ್ತಿ ತೆರಿಗೆ ನೋಂದಣಿ ಪತ್ರ
ಸಿ) ಎಫ್.ಎಸ್.ಎಸ್.ಎ.ಐ ಪ್ರಮಾಣ ಪತ್ರ

**ತಮ್ಮ ವಿಶ್ವಾಸಿ,**

**ಟೆಂಡರ್‌ದಾರರ ಸಹಿ ಮತ್ತು ವಿಳಾಸ**

ಮೇಲ್ಕಂಡ ಮಾಹಿತಿಗಳು ಸತ್ಯಪೂರ್ಣವಾಗಿದ್ದು ಏನಾದೂ ಬದಲಾವಣೆಗಳು ಆದಲ್ಲಿ ಕೂಡಲೇ ವರದಿ ಮಾಡಲಾಗುವುದು ಹಾಗೂ ಕಾಲಕಾಲಕ್ಕೆ ಆಗುವ ಬದಲಾವಣೆ ಬಗ್ಗೆ ತಿಳಿಸಲಾಗುವುದು.

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

# ಘೋಷಣಾ ಪತ್ರ

ದಿನಾಂಕ :

ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ
ಮಾಚೇನಹಳ್ಳಿ ನಿದಿಗೆ ಅಂಚೆ
ಶಿವಮೊಗ್ಗ.

ಮಾನ್ಯರೇ,

ವಿಷಯ ಃ ಟೆಂಡರ್‌ನಲ್ಲಿ ಬಿಡ್ ಮಾಡುವ ಬಗ್ಗೆ.

ಉಲ್ಲೇಖ ಃ ಟೆಂಡರ್ ಪ್ರಕಟಣೆ ಸಂಖ್ಯೆ: ಐ.ಎಫ್.ಟಿ. ಸಂಖ್ಯೆ /ಶಿಸಹಾಒ /ಶೇಮತಾಂ/ ಟೆಂಡರ್/ 6184/2023–24/ **ದಿನಾಂಕ: 25.10.2023**

****

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಬಿ.ಎಂ.ಸಿ. ಕೇಂದ್ರಗಳ ಹಾಲು ಸಾಗಾಣಿಕೆ ದ್ವೈವಾರ್ಷಿಕ ಗುತ್ತಿಗೆಗೆ ಸಂಬಂಧಿಸಿದ ಬಿಡ್ ನಿಯಮಾವಳಿಗಳ ಮಾಹಿತಿಗಳನ್ನು ತಿಳಿದು ಹಾಗೂ ಅನುಬಂಧ 'ಬಿ' 'ಸಿ' 'ಡಿ' ನಲ್ಲಿರುವ ಷರತ್ತು ಮತ್ತು ನಿಬಂಧನೆಗಳನ್ನು ಓದಿ, ಅರ್ಥ ಮಾಡಿಕೊಂಡಿದ್ದು ಟೆಂಡರ್‌ನಲ್ಲಿ ಭಾಗವಹಿಸುತ್ತಿದ್ದೇನೆ. ಟೆಂಡರ್‌ಗೆ ಮೂಲತಃ ಅವಶ್ಯಕತೆ ಇರುವ ಇ.ಎಂ.ಡಿ. (ಬಿಡ್ಡು ಠೇವಣಿ) ಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಿಯಮಾವಳಿಯಂತೆ ಸಲ್ಲಿಸಿದೆ. ಮಾರ್ಗಕ್ಕೆ ಸಂಬಂಧಿಸಿದ ವಾಹನದ ದಾಖಲಾತಿ ಪ್ರತಿಗಳನ್ನು ಸಹ ಲಗತ್ತಿಸಲಾಗಿದೆ/ಟೆಂಡರ್ ಒಪ್ಪಿಗೆಯಾದಲ್ಲಿ ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿದ ಸಾಮರ್ಥ್ಯದ / ಮಾದರಿಯ ಸೂಕ್ತ ವಾಹನ ನೀಡಲು ಬದ್ಧನಾಗಿರುತ್ತೇನೆ.

ಇ.ಎಂ.ಡಿಮೊತ್ತ ರೂ. ........................................ (ರೂಪಾಯಿ .......................................ಗಳು ಮಾತ್ರ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಿಯಮಾವಳಿ ರೀತ್ಯಾ ಸಲ್ಲಿಸಿದೆ.

ವಂದನೆಗಳೊಂದಿಗೆ,

ಟೆಂಡರ್ ಅರ್ಜಿ ಸಲ್ಲಿಸಿದ
ಮಾರ್ಗದ ಹೆಸರು :

ಟೆಂಡರ್‌ದಾರರ ಸಹಿ,

ವಿಳಾಸ

## ಪಟ್ಟಿ ಪರಿಶೀಲನೆ (ಚೆಕ್ ಲೀಸ್ಟ್)

## ಬಿ.ಎಂ.ಸಿ ಕೇಂದ್ರಗಳ ಹಾಲು ಸಾಗಾಣಿಕೆಗೆ ಟೆಂಡರ್

| | | | | |
|---|---|---|---|---|
| 01 | ನಿಗದಿತ ಇ.ಎಂ.ಡಿ.ಮೊತ್ತ ಇ–ಪೋರ್ಟಲ್ ಮೂಲಕ ಸಲ್ಲಿಸಲಾಗಿದೆಯಾ ? | ಃ | ಹೌದು | ಇಲ್ಲ |
| 02 | ಸಾರಿಗೆದಾರರ ಪೂರ್ಣ ಮಾಹಿತಿ(ಬಯೋಡಾಟಾ)ಸಲ್ಲಿಸಲಾಗಿದೆಯೇ? | ಃ | ಹೌದು | ಇಲ್ಲ |
| 03 | ಗುತ್ತಿಗೆಗೆ ನೀಡುವ ವಾಹನದ ದಾಖಲಾತಿ ಪ್ರತಿಗಳನ್ನು ಲಗತ್ತಿಸಲಾಗಿದೆಯೇ? | ಃ | ಹೌದು | ಇಲ್ಲ |
| 04 | ಆದಾಯ ತೆರಿಗೆ ಪ್ರಮಾಣ ಪತ್ರ ಲಗತ್ತಿಸಲಾಗಿದೆಯೇ ? | ಃ | ಹೌದು | ಇಲ್ಲ |
| 05 | ವೃತ್ತಿ ತೆರಿಗೆ ನೋಂದಣಿ ಪ್ರಮಾಣ ಪತ್ರ ಲಗತ್ತಿಸಲಾಗಿದೆಯೋ ? | ಃ | ಹೌದು | ಇಲ್ಲ |
| 06 | ವಾಣಿಜ್ಯ ಟೆಂಡರ್ ದರಪಟ್ಟಿಯನ್ನು ಭಾಗ–2 ರಲ್ಲಿ ಅಕ್ಷರ ಮತ್ತು ಪದಗಳನ್ನು ದರಗಳನ್ನು ನಮೂದಿಸಿದೆಯೇ | ಃ | ಹೌದು | ಇಲ್ಲ |

**ಎಚ್ಚರಿಕೆ :** ನಿಗದಿಪಡಿಸಿರುವ ಇ.ಎಂ.ಡಿ. ಲಗತ್ತಿಸದಿದ್ದಲ್ಲಿ ಟೆಂಡರ್ ನಿಯಮದ ಪ್ರಕಾರ ಟೆಂಡರ್ ಅರ್ಜಿ ರದ್ದಾಗುತ್ತದೆ.

ಟೆಂಡರ್‌ದಾರರ ಸಹಿ ಮತ್ತು ಮೊಹರು

ದಿನಾಂಕ :

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : 246161, 246165.
ದೂರವಾಣಿ ಸಂಖ್ಯೆ:08182-246165 E-Mail:shimulpandi@gmail.com Fax:08182-246284.

## ವಾಣಿಜ್ಯ ಟೆಂಡರ್ ಭಾಗ –2

**ಟೆಂಡರ್‌ದಾರರು ತಾಂತ್ರಿಕ ಟೆಂಡರ್ ಮತ್ತು ವಾಣಿಜ್ಯ ಟೆಂಡರ್ ದಾಖಲಾತಿಗಳನ್ನು ಇ.ಎಂ.ಡಿ. ಮೊತ್ತದೊಂದಿಗೆ ನಿಗದಿತ ಶುಲ್ಕ ಪಾವತಿಸಿ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರವೇ ಅಪ್‌ಲೋಡ್ ಮಾಡತಕ್ಕದ್ದು.**

**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : (08182) 246161, 246165**

# ವಾಣಿಜ್ಯ ಟೆಂಡರ್

## ದ್ವೈವಾರ್ಷಿಕ ದರ ಗುತ್ತಿಗೆ

2011 ರ ಅಥವಾ ನಂತರದ ಸಾಲಿನ ಇನ್ಸುಲೇಟೆಡ್ ಕಂಟೇನರ್ ಬಾಡಿ ಅಳವಡಿಸಿದ ರೋಡ್ ಮಿಲ್ಕ್ ಟ್ಯಾಂಕರ್ ವಾಹನಗಳಿಂದ ಶೀಥಲಿಕರಿಸಿದ ಹಾಲನ್ನು ಬಿ.ಎಂ.ಸಿ. ಕೇಂದ್ರಗಳಿಂದ ನಿಗದಿಪಡಿಸಿದ ಡೇರಿ/ಶೀತಲೀಕರಣ ಕೇಂದ್ರಗಳಿಗೆ ಸಾಗಾಣಿಕೆ ಮಾಡಲು, ವಿವಿಧ ಸಾಮರ್ಥ್ಯದ ಸುಸ್ಥಿತಿಯಲ್ಲಿರುವ ಹಾಲು ಸಾಗಾಣಿಕೆ ಟ್ಯಾಂಕರ್ ವಾಹನಗಳನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ವಾಣಿಜ್ಯ ಟೆಂಡರ್.

## ವಾಣಿಜ್ಯ ಟೆಂಡರ್ ಭಾಗ—2

| | | |
|---|---|---|
| 1 | ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ | ದಿನಾಂಕ: 25.10.2023 ರಿಂದ |
| 2 | ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 15.11.2023 ರಂದು ಸಂಜೆ: 17.30 ಗಂಟೆಯವರೆಗೆ |
| 3 | ಭರ್ತಿ ಮಾಡಿದ ಟೆಕ್ನಿಕಲ್ ಟೆಂಡರ್ ತೆರೆಯುವ ದಿನ | ದಿನಾಂಕ: 17.11.2023 ರಂದು ಬೆಳಿಗ್ಗೆ: 11.30 ಗಂಟೆಯ ನಂತರ |
| 4 | ಭರ್ತಿ ಮಾಡಿದ ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ | ದಿನಾಂಕ: 20.11.2023 ರಂದು ಬೆಳಿಗ್ಗೆ: 11.30 ಗಂಟೆಯ ನಂತರ |

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

# ವಾಣಿಜ್ಯ ಟೆಂಡರ್ ಭಾಗ – 2

## ಅರ್ಹತೆ

ತಾಂತ್ರಿಕ ಟೆಂಡರ್‌ನ ಭಾಗ –1 ರಲ್ಲಿನ ನಿಯಮಾವಳಿಗಳ ಷರತ್ತು ಮತ್ತು ನಿಬಂಧನೆಗಳನ್ನು ಸಂಪೂರ್ಣವಾಗಿ ಯಾರು ಪೂರೈಸುತ್ತಾರೋ ಅಂತಹ ಬಿಡ್ಡುದಾರರ ವಾಣಿಜ್ಯ ಟೆಂಡರ್‌ನ್ನು ಅಂಗೀಕರಿಸಿ ಅಂತಿಮವಾಗಿ ಟೆಂಡರ್ ಇತ್ಯರ್ಥ ಮಾಡಲಾಗುವುದು. ಅರ್ಹತೆ ಪಡೆಯದ ಇತರೆ ವಾಣಿಜ್ಯ ಟೆಂಡರ್‌ಗಳನ್ನು ಸಾರಾಸಗಟಾಗಿ ತಿರಸ್ಕರಿಸಲಾಗುವುದು.

ಸದರಿ ನಿಯಮಗಳ ಷರತ್ತು ಮತ್ತು ನಿಬಂಧನೆಗಳಿಗೆ ನಾನು ಬದ್ಧನಾಗಿರುತ್ತೇನೆ.

ಟೆಂಡರ್‌ದಾರರ ಸಹಿ
ಹೆಸರು
ಮತ್ತು ಮೊಹರು

ವಿಳಾಸ :

ಹೆಸರು : ............................................................

ತಂದೆಯ ಹೆಸರು : .............................................

ವಿಳಾಸ :...............................................................

..............................................................................

..................................ಪಿನ್ ಕೋಡ್...................

ದೂರವಾಣಿ ಸಂ: ...............................................

# ದರಪಟ್ಟಿ

ದಿನಾಂಕ :

**ವ್ಯವಸ್ಥಾಪಕ ನಿರ್ದೇಶಕರು**
**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ**
**ಜಿಲ್ಲಾ ಸಹಕಾರ ಹಾಲು ಒಕ್ಕೂಟ**
**ಮಾಚೇನಹಳ್ಳಿ ನಿದಿಗೆ ಅಂಚೆ**
**ಶಿವಮೊಗ್ಗ.**
ಮಾನ್ಯರೇ,

ಉಲ್ಲೇಖ : ಟೆಂಡರ್ ಪ್ರಕಟಣೆ ಸಂಖ್ಯೆ: ಐ.ಎಫ್.ಟಿ. ಸಂಖ್ಯೆ /ಶಿಸಹಾಒ /ಶೇಮತಾಂ/ ಟೆಂಡರ್/6184/2023–24/ **ದಿನಾಂಕ: 25.10.2023**

****

ಮೇಲಿನ ಉಲ್ಲೇಖದನ್ವಯ ನಾನು / ನಾವು ಬಿ.ಎಂ.ಸಿ. ಕೇಂದ್ರಗಳಿಂದ ಡೇರಿ/ಶೀತಲೀಕರಣ ಕೇಂದ್ರಕ್ಕೆ ಹಾಲು ಸಾಗಾಣಿಕೆ ಮಾಡಲು ಈ ಕೆಳಗೆ ನಮೂದಿಸಿರುವ ಮಾರ್ಗಗಳಲ್ಲಿ ಸಾಗಾಣಿಕೆ ಕಾಮಗಾರಿ ನಿರ್ವಹಿಸಲು ವಾಹನ ಒದಗಿಸಲು ನನ್ನ /ನಮ್ಮ ದರಪಟ್ಟಿ ಸಲ್ಲಿಸಿರುತ್ತೇನೆ/ತ್ತೇವೆ.

| ಮಾರ್ಗದ ಹೆಸರು/ಸಂಖ್ಯೆ | ಮಾರ್ಗದ ಅಂದಾಜು ದೂರ | ಟೆಂಡರ್‌ಗಾಗಿ ಸೂಚಿಸಿರುವ ದರ ಪ್ರತಿ ಕಿ.ಮೀ.ಗೆ ರೂ. ಪೈ. |
|---|---|---|
| | | ರೂ. ಪೈ.<br>ರೂ................................. (ಅಕ್ಷರಗಳಲ್ಲಿ).........<br>..................................................................) |

ನಾನು/ನಾವು ಮತ್ತೊಮ್ಮೆ ದೃಢೀಕರಿಸಿರುವಂತೆ ನಾನು/ನಾವು ಕಾಮಗಾರಿಯ ವಿವರಗಳನ್ನು ಅಭ್ಯಸಿಸಿರುತ್ತೇವೆ. ಹಾಗೂ ಕಾಮಗಾರಿಯ ನಿಯಮ ನಿಬಂಧನೆಗಳನ್ನು, ವಿವರ ಮಾಹಿತಿಗಳನ್ನು ಮಾರ್ಗಸೂಚಿಗಳನ್ನು ಹಾಗೂ ಇತರೆ ಅಗತ್ಯ ವಿಷಯಗಳನ್ನು ಅರ್ಥ ಮಾಡಿಕೊಂಡಿರುತ್ತೇನೆ/ತ್ತೇವೆ. ನಾನು/ನಾವು ಕಾಮಗಾರಿಯ ರೀತಿ ನೀತಿಗಳನ್ನು ಸಂಪೂರ್ಣ ಅರಿತವನಾಗಿರುತ್ತೇನೆ. ಹಾಗೂ ಇದಕ್ಕೆ ಅನುಗುಣವಾಗಿಯೇ ದರಪಟ್ಟಿಯನ್ನು ಸಲ್ಲಿಸಿರುತ್ತೇನೆ. ಮೇಲೆ ತಿಳಿಸಿರುವ ದರಗಳು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. (ಆದಾಯ ತೆರಿಗೆ (ಟಿಡಿಎಸ್) ವೃತ್ತಿ ತೆರಿಗೆ ಹಾಗೂ ಚಾಲ್ತಿಯಲ್ಲಿರುವ ಇತರೆ ತೆರಿಗೆ ಮತ್ತು ರಾಜ್ಯ/ರಾಷ್ಟ್ರೀಯ ಹೆದ್ದಾರಿ ಶುಲ್ಕಗಳು ಸೇರಿರುತ್ತದೆ

ಗುತ್ತಿಗೆಗೆ ಸಂಬಂಧಪಟ್ಟಂತೆ ನಿಯಮ ನಿಬಂಧನೆಗಳನ್ನು ಕುರಿತಾಗಿ ಉಂಟಾಗಬಹುದಾದ ಯಾವುದೇ ತಂಟೆ/ತಕರಾರಿಗೆ ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ನೀಡುವ ತೀರ್ಮಾನವೇ ಅಂತಿಮ ಎನ್ನುವ ವಿಷಯಕ್ಕೆ ನಾನು/ನಾವು ಬದ್ಧರಾಗಿರುತ್ತೇನೆ/ತ್ತೇವೆ.

ಟೆಂಡರ್‌ದಾರರ ಸಹಿ
ಹೆಸರು
ತಂದೆ ಹೆಸರು

**ಸೂಚನೆ: ಮೇಲ್ಕಂಡ ನಮೂನೆಯನ್ನು ಕೇವಲ ಮಾಹಿತಿಗಾಗಿ ನೀಡಲಾಗಿದೆ. ಸಂಬಂಧಿಸಿದಂತೆ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ ಇವರು ದಿನಾಂಕ** : 21.03.2017 **ರ ಸುತ್ತೋಲೆಯಲ್ಲಿ ತಿಳಿಸಿರುವಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗುತ್ತಿಗೆದಾರರು ನಮೂದಿಸುವ ದರಗಳನ್ನು ಪರಿಗಣಿಸಲಾಗುವುದು. ಬದಲಿಗೆ ಟೆಂಡರ್ ಅನುಬಂಧಗಳು, ನಮೂನೆಗಳು, ಹಾಗೂ ಇತರೆ ಯಾವುದೇ ಮಾಧ್ಯಮದ ಮೂಲಕ ನಮೂದಿಸುವ ದರಗಳನ್ನು ಪರಿಗಣಿಸಲಾಗುವುದಿಲ್ಲ.**

**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop**

ನಂ/ಶಿಸಹಾಒ/ಶೇಮತಾಂ/ಟೆಂಡರ್/ 6184/2023–24 ದಿನಾಂಕ: 25.10.2023

***ಹಾಲಿನ ಟ್ಯಾಂಕರ್‌ಗಳನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ***

**KMF/2023-24/SE0933**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬಿ.ಎಂ.ಸಿ. ಕೇಂದ್ರಗಳಿಂದ ಶೀತಲೀಕರಣ ಕೇಂದ್ರಕ್ಕೆ/ಡೇರಿಗೆ ಹಾಲು ಸಾಗಾಣಿಕೆ ಮಾಡಲು 2011 ರ ಅಥವಾ ನಂತರದ ಮಾದರಿಯ 09 ಕೆ.ಎಲ್ ಸಾಮರ್ಥ್ಯದ ಸ್ಟೇನ್‌ಲೆಸ್ ಸ್ಟೀಲ್ ಹಾಲಿನ ಟ್ಯಾಂಕರ್‌ಗಳನ್ನು, ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಬಾಡಿಗೆ/ಗುತ್ತಿಗೆ ಪಡೆಯಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ನಿಬಂಧನೆಗಳ ಸಹಿತ ಜಿ.ಒ.ಕೆ. **ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ** **ಪೋರ್ಟಲ್** ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

ವಿಳಾಸ : https://kppp.karnataka.gov.in

| | | |
|---|---|---|
| 1 | ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ | ದಿನಾಂಕ: 25.10.2023 ರಿಂದ |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ | ದಿನಾಂಕ: 15.11.2023 ರಂದು ಸಂಜೆ: 17.30 ಗಂಟೆಯವರೆಗೆ |
| 4 | ಟೆಕ್ನಿಕಲ್ ಟೆಂಡರ್ ತೆರೆಯುವ | ದಿನಾಂಕ: 17.11.2023 ರಂದು ಬೆಳಿಗ್ಗೆ: 11.30 ಗಂಟೆಯ ನಂತರ |
| 5 | ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ | ದಿನಾಂಕ: 20.11.2023 ರಂದು ಬೆಳಿಗ್ಗೆ: 11.30 ಗಂಟೆಯ ನಂತರ |

| ಕ್ರಮ ಸಂಖ್ಯೆ | ಬಿ.ಎಂ.ಸಿ. ಹಾಲಿನ ಟ್ಯಾಂಕರ್ ಮಾರ್ಗದ ವಿವರ | ಟ್ಯಾಂಕರ್ ಸಾಮರ್ಥ್ಯ | ದಿನದ ಅಂದಾಜು ಅಂತರ ಕಿ.ಮೀ | ಇ.ಎಂ.ಡಿ ₹ | ಭದ್ರತಾ ಠೇವಣಿ ₹ |
|---|---|---|---|---|---|
| 1 | ಶಿದಾಚಿಮೂಲ್ ಬಿ.ಎಂ.ಸಿ ಟ್ಯಾಂಕರ್ ಮಾರ್ಗ–16 (ಶಿರಿವಂತೆ,ಕೆಳದಿ,ನಿಸರಾಣಿ) | 9 ಕೆ.ಎಲ್ | 110 ಕಿ.ಮೀ | 50,000/– | 2,00,000/– |

**ನಿಬಂಧನೆ ಮತ್ತು ಷರತ್ತುಗಳು**

1. ಕ್ರ.ಸಂ 1 ರ ಹಾಲು ಸಾಗಾಣಿಕೆ ಟ್ಯಾಂಕರ್ ಮಾರ್ಗಕ್ಕೆ ಪ್ರಕಟಿಸಿದಂತೆ ನಿಗದಿತ **ಸಾಮರ್ಥ್ಯದ ಎಸ್.ಎಸ್. ಇನ್ಸುಲೇಟೆಡ್ ಹಾಲಿನ ಟ್ಯಾಂಕರ್** ವಾಹನ ಹೊಂದಿದವರು ಮಾತ್ರ (ಆರ್.ಸಿ. ಪುಸ್ತಕದಲ್ಲಿ ಹಾಲಿನ ಟ್ಯಾಂಕರ್ ಮತ್ತು ಸಾಮರ್ಥ್ಯ ದಾಖಲಾಗಿರಬೇಕು) ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ. ವಾಹನಕ್ಕೆ ಸಂಬಂಧಿಸಿದ **B-extract report from the RTO, Upadated RC book including Fitness Certificate, Permit, Insurance, Ownership, Emmission test, Capacity of tanker as per RC book details** ಮುಂತಾದ ಎಲ್ಲಾ ನವೀಕರಣ ದಾಖಲಾತಿಗಳನ್ನು ಅಥವಾ ಸಾರಿಗೆ ಇಲಾಖೆಯಿಂದ ಪಡೆದ ವಾಹನದ ಬಿ.ಎಕ್ಸಾಟ್ರ್ಯಾಕ್ಟ್ ರಿಪೋರ್ಟ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ. ಒಕ್ಕೂಟದ ವ್ಯಾಪ್ತಿಯಲ್ಲಿ ಮೇಲೆ ತಿಳಿಸಿರುವ ಮಾರ್ಗಗಳಲ್ಲಿ ಹಾಲಿ ಚಲಿಸುತ್ತಿರುವ ಟ್ಯಾಂಕರ್‌ಗಳನ್ನು ಹೊರತುಪಡಿಸಿ ಟೆಂಡರ್ ಅವಧಿ ಮುಗಿಯದೇ ಇರುವ ಟ್ಯಾಂಕರ್ ಮಾರ್ಗಗಳ ವಾಹನದ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವಂತಿಲ್ಲ.
2. **ಕಹಾಮ ಘಟಕ/ಒಕ್ಕೂಟಗಳಲ್ಲಿ ಕನಿಷ್ಠ 2 ವರ್ಷಗಳ ಟ್ಯಾಂಕರ್ ಸೇವೆ ಸಲ್ಲಿಸಿರುವ ಅನುಭವದೊಂದಿಗೆ ಸೇವೆ ತೃಪ್ತಿಕರವಾಗಿರುವ ಬಗ್ಗೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಟೆಂಡರ್‌ನಲ್ಲಿ ಸಲ್ಲಿಸುವುದು.**
3. **ಇನ್ಸೂಲೇಟೆಡ್ ಟ್ಯಾಂಕರ್‌ಗಳಲ್ಲಿ ಹಾಲು ಸಾಗಾಣಿಕೆ ಮಾಡುವ ಸಂಬಂಧ ನೀಡಲಾಗುವ ಎಫ್.ಎಸ್.ಎಸ್.ಎ.ಐ ಲೈಸೆನ್ಸ್ ಪ್ರತಿಯನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡತಕ್ಕದ್ದು. Kind of Business ನಲ್ಲಿ Transport: Transporter (having a number of specialised vehicles like insulated refrigerated van/ wagon, milk tankers etc) ಎಫ್.ಎಸ್.ಎಸ್.ಎ.ಐ ಲೈಸೆನ್ಸ್ ನಲ್ಲಿ ಟ್ಯಾಂಕರ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿರಬೇಕು.**
4. ಬಿ.ಎಂ.ಸಿ ಹಾಲು ಸಾಗಾಣಿಕೆ ಟ್ಯಾಂಕರ್‌ಗಳ ಟೆಂಡರ್‌ಗೆ ಸಂಬಂಧಿಸಿದಂತೆ ಅಪ್‌ಲೋಡ್ ಮಾಡಲಾದ ಎಲ್ಲಾ ದಾಖಲಾತಿಗಳ ಮೂಲ ಪ್ರತಿಗಳನ್ನು ಒಕ್ಕೂಟವು ಪರಿಶೀಲಿಸಲು ಇಚ್ಛಿಸಿದ್ದಲ್ಲಿ, ಸೂಚಿಸಿದ ಒಂದು ವಾರದೊಳಗೆ ಒಕ್ಕೂಟಕ್ಕೆ ಸಲ್ಲಿಸಲು ಬದ್ಧರಾಗಿರತಕ್ಕದ್ದು.
5. ಕನಿಷ್ಠ ಇ.ಎಂ.ಡಿ. ರೂ.50,000/– ಹಾಲಿನ ಟ್ಯಾಂಕರ್ ಮಾರ್ಗಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ವೇದಿಕೆಯ ನಿಯಾಮವಳಿಯಂತೆ (Variable EMD) ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿ ಅಪ್‌ಲೋಡ್ ಮಾಡಲಾದ ಟೆಂಡರ್‌ನ್ನು ತಿರಸ್ಕರಿಸಲಾಗುವುದು.
6. **ಟೆಂಡರ್ ಹಾಕಬಯಸುವ ಬಿಡ್ದುದಾರರು ಸದರಿ ಟೆಂಡರ್ ಫಾರಂನ್ನು ಪ್ರತಿ ಮಾರ್ಗಕ್ಕೆ ಒಂದರಂತೆ ಭರ್ತಿ ಮಾಡಿ (ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಅರ್ಜಿ) ಪ್ರತ್ಯೇಕವಾಗಿ ಅಪ್‌ಲೋಡ್ ಮಾಡುವುದು.**

7. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲಿನ ಟ್ಯಾಂಕರ್‌ಗೆ ರಾಜ್ಯ/ರಾಷ್ಟ್ರೀಯ ಹೆದ್ದಾರಿ ಶುಲ್ಕಗಳನ್ನು ಟೆಂಡರ್‌ದಾರರೇ ಭರಿಸತಕ್ಕದ್ದು. ಫಾಸ್ಟ್ ಟ್ಯಾಗ್ ಮಾಡಿಸತಕ್ಕದ್ದು/ಹೊಂದಿರತಕ್ಕದ್ದು.

8. ಹಾಲಿನ ಟ್ಯಾಂಕರ್ 2011 ರ ಅಥವಾ ನಂತರದ ಮಾಡಲ್ ಆಗಿರಬೇಕು. ವಾಹನವು ಸುಸ್ಥಿತಿಯಲ್ಲಿದ್ದು, ವಾಹನಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಸಹ ಚೆಕ್ ಲಿಸ್ಟ್‌ನಲ್ಲಿ ಕ್ರಮಬದ್ಧವಾಗಿ ಬರೆದು (ಆರ್.ಸಿ.ಬುಕ್, ಎಫ್.ಸಿ, ಪರಮಿಟ್, ಇನ್ಸೂರೆನ್ಸ್, ಟ್ಯಾಕ್ಸ್ ಕಾರ್ಡ್ ಎಮಿಷನ್ ಟೆಸ್ಟ್, ಮುಂತಾದವುಗಳು.)ಟೆಂಡರ್‌ದಾಖಲಾತಿಗಳೊಂದಿಗೆ ಕಡ್ಡಾಯವಾಗಿ ಅಪ್‌ಲೋಡ್ ಮಾಡತಕ್ಕದ್ದು. ಅಪ್‌ಲೋಡ್ ಮಾಡಲಾದ ಹಾಲಿನ ಟ್ಯಾಂಕರ್ ದಾಖಲಾತಿಗಳನ್ನು ಆನ್‌ಲೈನ್ mParivahan app ನಲ್ಲಿ ಪರಿಶೀಲಿಸಲಾಗುವುದು

9. ಕ್ರ.ಸಂ 1 ರ ಮಾರ್ಗಕ್ಕೆ ಟೆಂಡರ್‌ನಲ್ಲಿ ಸಮ ದರ ಕಂಡುಬಂದಲ್ಲಿ ಟೆಂಡರ್‌ದಾರರೊಂದಿಗೆ ಪುನಃ ದರ ಸಂಧಾನ ಮಾಡಿ ಕಡಿಮೆ ದರ ನಮೂದಿಸುವ ಟೆಂಡರ್‌ದಾರರಿಗೆ ಟೆಂಡರ್ ನೀಡಲಾಗುವುದು.

10. ಒಕ್ಕೂಟದ ವ್ಯಾಪ್ತಿಯಲ್ಲಿನ ಎಲ್ಲಾ ಬಿ.ಎಂ.ಸಿ. ಟ್ಯಾಂಕರ್‌ಗಳಿಗೆಕಡ್ಡಾಯವಾಗಿ GPS ಅಳವಡಿಸಲು ಯೋಜಿಸಲಾಗಿದ್ದು, ಒಕ್ಕೂಟವು ಸೂಚಿಸಿದ ಮಾದರಿಯ GPS ಯಂತ್ರವನ್ನು ಸ್ವಂತ ಖರ್ಚಿನಲ್ಲಿ ಖರೀದಿಸಿ ಅಳವಡಿಸಲು ಇಚ್ಛೆಯುಳ್ಳ ಟೆಂಡರ್‌ದಾರರು ಮಾತ್ರ ಟೆಂಡರ್ ಅರ್ಜಿ ಸಲ್ಲಿಸಬಹುದು. ಕಚೇರಿಯಿಂದ ಆದೇಶಿಸಿದಲ್ಲಿ GPS ಅಳವಡಿಸಲು ಮತ್ತು ಅದಕ್ಕೆ ಕರೆನ್ಸಿ ಹಾಕಿಸಲು ಬದ್ಧರಾಗಿರಬೇಕು. ಅಥವಾ ಒಕ್ಕೂಟದಿಂದ ಜಿ.ಪಿ.ಎಸ್. ಅಳವಡಿಸಿದಲ್ಲಿ ಅದರ ಮೊತ್ತವನ್ನು ಸಾರಿಗೆ ಬಿಲ್ಲಿನಲ್ಲಿ ಕಠಾಯಿಸಲಾಗುವುದು.

11. ಬಿ.ಎಂ.ಸಿ. ಹಾಲು ಸಾಗಾಣಿಕೆಗೆ ಟೆಂಡರ್ ಪಡೆದ ಟೆಂಡರ್‌ದಾರರು/ಗುತ್ತಿಗೆದಾರರು ಟೆಂಡರ್‌ಗೆ ನೀಡಿದ ವಾಹನ ದಾಖಲಾತಿಗಳಲ್ಲಿ ನಮೂದಿಸಿರುವ ಟ್ಯಾಂಕರ್‌ನ್ನು ಮಾತ್ರ ಮಾರ್ಗಕ್ಕೆ ಒದಗಿಸತಕ್ಕದ್ದು. ಸದರಿ ಟ್ಯಾಂಕರ್‌ನ್ನು ಮತ್ತು ವಾಹನವನ್ನು ಯಾವುದೇ ಕಾರಣಕ್ಕೂ ಬದಲಾಯಿಸುವಂತಿಲ್ಲ.

12. ಬಿ.ಎಂ.ಸಿ. ಮಾರ್ಗದ ಹಾಲು ಸಾಗಾಣಿಕೆಗೆ ಟೆಂಡರ್ ಪಡೆದ ಟೆಂಡರ್‌ದಾರರು/ಗುತ್ತಿಗೆದಾರರು ತಾವು ಪಡೆದಿರುವ ಬಿ.ಎಂ.ಸಿ ಮಾರ್ಗದ ಹೆಸರು ಮತ್ತು ಬಿ.ಎಂ.ಸಿ ಕೇಂದ್ರಗಳ ಹೆಸರನ್ನು ಕ್ರಮಬದ್ಧವಾಗಿ ವಾಹನದ ಹಿಂದೆ ಟ್ಯಾಂಕರ್ ಮೇಲೆ ಬಣ್ಣದಿಂದ ಬರೆಸತಕ್ಕದ್ದು.

13. ಒಕ್ಕೂಟವು ಸೂಚಿಸಿದ ಸಂಸ್ಥೆಯಿಂದ ಅಥವಾ ಕಹಾಮವತಿಯಿಂದ ನೇಮಿಸಲ್ಪಟ್ಟ ಸಂಸ್ಥೆಯಿಂದ ಹಾಲಿನ ಟ್ಯಾಂಕರ್ ಸಾಮರ್ಥ್ಯವನ್ನು ಕ್ಯಾಲಿಬರೇಷನ್ ಮಾಡಿಸುವುದು ಕಡ್ಡಾಯವಾಗಿರುತ್ತದೆ.

14. ಬಿ.ಎಂ.ಸಿ ಹಾಲು ಸಾಗಾಣಿಕೆ ಟ್ಯಾಂಕರ್‌ಗೆ ಟೆಂಡರ್ ಸಲ್ಲಿಸಬಯಸುವವರು ನಿಗದಿಪಡಿಸಿದ ಬಿ.ಎಂ.ಸಿ. ಕೇಂದ್ರದಿಂದ ಹಾಲನ್ನು ಎತ್ತುವಳಿ ಮಾಡುವುದಕ್ಕೆ ಮೊದಲು ಹಾಲಿನ ಗುಣಮಟ್ಟ ಮತ್ತು ಪ್ರಮಾಣವನ್ನು ಬಿ.ಎಂ.ಸಿ. ಸಂಘದ ಸಿಬ್ಬಂದಿಯ ಸಮ್ಮುಖದಲ್ಲಿ ಪರೀಕ್ಷಿಸಿ ದಾಖಲಿಸಿಕೊಂಡು ಹಾಲನ್ನು ಟ್ಯಾಂಕರ್‌ಗೆ ತುಂಬಿಸಿಕೊಳ್ಳುವ ಜವಾಬ್ದಾರಿಯಾಗಿದ್ದು, ಹಾಲಿನ ಪರಿಮಾಣ ಮತ್ತು ಗುಣಮಟ್ಟದಲ್ಲಿ ವ್ಯತ್ಯಾಸಗಳಾದಲ್ಲಿ ಟೆಂಡರ್‌ದಾರರೇ ಹೊಣೆಗಾರರಾಗಬೇಕಾಗುತ್ತದೆ. ವ್ಯತ್ಯಾಸದ ಮೊತ್ತವನ್ನು ಹಾಲಿನ ಟ್ಯಾಂಕರ್ ಸಾಗಾಣಿಕೆ ಬಿಲ್ಲಿನಲ್ಲಿ ಕಠಾಯಿಸಲಾಗುವುದು. ಈ ಷರತ್ತಿಗೆ ಬದ್ಧರಾದ ವಾಹನ ಮಾಲೀಕರು/ಟೆಂಡರ್‌ದಾರರು ಮಾತ್ರ ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ.

15. ಯಾವ ಸಂದರ್ಭದಲ್ಲಿಯೇ ಆಗಲಿ ಗುತ್ತಿಗೆದಾರರ ಸೇವೆ ತೃಪ್ತಿಕರ/ಸಮರ್ಪಕವಾಗಿ ಇಲ್ಲದಿದ್ದಲ್ಲಿ ಗುತ್ತಿಗೆ ಒಪ್ಪಂದವನ್ನು ರದ್ದುಪಡಿಸುವುದು ಅವಶ್ಯವೆಂದು ಒಕ್ಕೂಟವು ಮನಗಂಡಲ್ಲಿ ಸದರಿ ಗುತ್ತಿಗೆದಾರರಿಗೆ ಯಾವುದೇ ನೋಟಿಸು ನೀಡದೇ ಗುತ್ತಿಗೆಯನ್ನು ರದ್ದುಪಡಿಸುವ ಅಧಿಕಾರವನ್ನು ಒಕ್ಕೂಟವು ಹೊಂದಿರುತ್ತದೆ ಹಾಗೂ ಅವಶ್ಯಕತೆ ಕಂಡುಬಂದಲ್ಲಿ ಗುತ್ತಿಗೆದಾರರ ಹೆಸರನ್ನು ಕಪ್ಪುಪಟ್ಟಿಯಲ್ಲಿ ಸೇರಿಸುವ ಅಧಿಕಾರವನ್ನು ಸಹ ಒಕ್ಕೂಟವು ಹೊಂದಿರುತ್ತದೆ.

16. ಗುತ್ತಿಗೆ ಒಪ್ಪಂದವು 2 ವರ್ಷಗಳ ಅವಧಿಯವರೆಗೆ ಇದ್ದು ಸೇವೆ ತೃಪ್ತಿಕರವಾಗಿದ್ದಲ್ಲಿ ಒಪ್ಪಂದದ ಅವಧಿ ಮುಕ್ತಾಯಗೊಂಡ ನಂತರ ಒಕ್ಕೂಟದ ವಿವೇಚನೆ ಮೇರೆಗೆ ಪ್ರಸ್ತುತ ಚಾಲ್ತಿಯಲ್ಲಿರುವ ಒಪ್ಪಂದದ ಅವಧಿಯನ್ನು 3 ತಿಂಗಳು ವಿಸ್ತರಿಸುವ ಅಧಿಕಾರವು ಒಕ್ಕೂಟಕ್ಕಿರುತ್ತದೆ ಹಾಗೂ ಪ್ರಕೃತಿ ವಿಕೋಪ, ತುರ್ತು ಸಂದರ್ಭ ಮತ್ತು ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಒಕ್ಕೂಟವು ತನ್ನ ವಿವೇಚನೆ ಮೇರೆಗೆ ಮತ್ತೊಮ್ಮೆ 3 ತಿಂಗಳು ಒಪ್ಪಂದವನ್ನು ಮುಂದುವರೆಸುವ ಅಧಿಕಾರವನ್ನು ಹೊಂದಿರುತ್ತದೆ.

17. **ಹಾಲು ಸಾಗಾಣಿಕೆ ಟ್ಯಾಂಕರ್ ವಾಹನದ ಗುತ್ತಿಗೆಯನ್ನು ನೀಡಿದ ಮೇಲೆ ಯಾವುದೇ ಕಾರಣಕ್ಕೂ ಸಾರಿಗೆ ಗುತ್ತಿಗೆಯನ್ನು ವರ್ಗಾಯಿಸುವಂತಿಲ್ಲ. ಅನಿಶ್ಚಿತ ಪರಿಸ್ಥಿತಿಯಲ್ಲಿ ಗುತ್ತಿಗೆಯನ್ನು ರದ್ದುಪಡಿಸಿ ಮರುಟೆಂಡರ್‌ಗೆ ಕ್ರಮವಿಡಲಾಗುವುದು.**

18. ಹಾಲಿನ ಇನ್ಸುಲೇಟೆಡ್ ವಾಹನದ ಗುತ್ತಿಗೆಯು ಶೀಘ್ರ ನಿರ್ವಹಣೆ ಕ್ಷಮತೆಯನ್ನು ಅವಲಂಬಿಸಿದೆ. ಆದ್ದರಿಂದ ಈ ಬಗ್ಗೆ ಇನ್ಸುಲೇಟೆಡ್ ಟ್ಯಾಂಕರ್ ವಾಹನವನ್ನು ಕಚೇರಿ ಆದೇಶ ಪಡೆಯುವ ಮುನ್ನ ಒಕ್ಕೂಟವು ನಡೆಸುವ ತಾಂತ್ರಿಕ ಪರೀಕ್ಷೆಗೆ ಒಳಪಡಿಸುವುದು, ವಾಹನವು ಹಾಲನ್ನು ಸಾಗಾಣಿಕೆ ಮಾಡಲು ಯೋಗ್ಯವಾಗಿದ್ದಲ್ಲಿ ಮಾತ್ರ ಪರಿಗಣಿಸಲಾಗುವುದು. ಹಾಗೂ ಪ್ರತಿ ಆರು ತಿಂಗಳಿಗೊಮ್ಮೆ ಒಕ್ಕೂಟವು ಸೂಚಿಸಿದಾಗ ವಾಹನದ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಒಳಪಡಿಸುವುದು.

19. ವಾಹನದ ಗುತ್ತಿಗೆದಾರರು 18 ವರ್ಷ ವಯೋಮಿತಿ ಮೇಲ್ಪಟ್ಟ ಕನಿಷ್ಠ ಎಸ್.ಎಸ್.ಎಲ್.ಸಿ ವಿದ್ಯಾರ್ಹತೆಯುಳ್ಳ ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕಾಗಿದ್ದು, ಹಾಗೂ ಹಾಲು ಸಾಗಾಣಿಕೆ ಟ್ಯಾಂಕರ್ ಮಾರ್ಗಗಳ ಗುತ್ತಿಗೆದಾರರು ಹಾಗೂ ಅವರ ಸಿಬ್ಬಂದಿ ಒಕ್ಕೂಟ/ಕಹಾಮ ವಿರುದ್ಧ ಅಪಪ್ರಚಾರ, ಯಾವುದೇ ರೀತಿಯಲ್ಲಿ ಒಕ್ಕೂಟ/ಕಹಾಮದ ಹಿತಾಸಕ್ತಿಗೆ ಮತ್ತು ವ್ಯವಸ್ಥೆಗೆ ಧಕ್ಕೆ ತರುವ ಕಾರ್ಯಚಟುವಟಿಕೆಗಳನ್ನು ನಡೆಸುವಂತಿಲ್ಲ.

20. ಗುತ್ತಿಗೆದಾರರು ಹಾಗೂ ಅವರ ಸಿಬ್ಬಂದಿ ಪಾನಮತ್ತರಾಗಿ ಕೆಲಸಕ್ಕೆ ಹಾಜರಾಗುವಂತಿಲ್ಲ. ಸಂಘಗಳಿಂದ ಪ್ರತ್ಯೇಕ ಸಂಭಾವನೆ ಕೇಳುವುದು ಮುಂತಾದ ನ್ಯೂನ್ಯತೆಗಳು ಆಗದಂತೆ ಶಿಸ್ತು ಮತ್ತು ಜವಾಬ್ದಾರಿಯಿಂದ ವಾಹನ ಸಿಬ್ಬಂದಿಗಳು ಕೆಲಸ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ.

21. ಒಪ್ಪಂದದ ಅವಧಿಯಲ್ಲಿ ಗುತ್ತಿಗೆ ವಾಹನವನ್ನು ಮಾರಾಟ ಮಾಡುವುದು ಅನಿವಾರ್ಯವಾದಲ್ಲಿ ಒಕ್ಕೂಟದ ಅನುಮತಿ ಪಡೆದು ಗುತ್ತಿಗೆ ಕೆಲಸ ಕಾರ್ಯಗಳಿಗೆ ತೊಂದರೆಯಾಗದ ರೀತಿಯಲ್ಲಿ ಆದೇಶ ಪಡೆದ ಸಾಮರ್ಥ್ಯದ ಟ್ಯಾಂಕರ್ ವಾಹನವನ್ನು ಬದಲಿ ವ್ಯವಸ್ಥೆ ಮಾಡಿ, ತಾಂತ್ರಿಕ ಪರೀಕ್ಷೆಗೆ ಒಳಪಡಿಸಿ ವಾಹನದ ದಾಖಲೆಗಳನ್ನು ಒಕ್ಕೂಟಕ್ಕೆ ಸಲ್ಲಿಸಿದ ನಂತರ ಗುತ್ತಿಗೆ ವಾಹನವನ್ನು ಮಾರಾಟ ಮಾಡಬಹುದು.

22. ದುರಸ್ತಿ ಅಥವಾ ಅಪಘಾತ ಕಾರಣದಿಂದ ಇನ್ಸುಲೇಟೆಡ್ ವಾಹನವು ಹಾಳಾದಲ್ಲಿ 10 ದಿನಗಳೊಳಗೆ ವಾಹನವನ್ನು ಸರಿಪಡಿಸಿ ಒದಗಿಸುವುದು. ಒಂದು ವೇಳೆ ವಾಹನ ಸಂಪೂರ್ಣ ಜಖಂ ಆದ ಪಕ್ಷದಲ್ಲಿ 30 ದಿನಗಳೊಳಗೆ ವಾಹನ ಸರಿಪಡಿಸಿ ಒದಗಿಸಬೇಕು ಹಾಗೂ ಅಲ್ಲಿಯವರೆಗೆ ಗುತ್ತಿಗೆದಾರರು ಲಿಖಿತವಾಗಿ ತಿಳಿಸಿ ಬದಲಿ ವ್ಯವಸ್ಥೆ ಮಾಡಲು ಕ್ರಮಕೈಗೊಳ್ಳಬೇಕು.

23. ಸಂಘಗಳು ನೀಡುವ ಹಾಲಿನ ಗುಣಮಟ್ಟವನ್ನು ಕಾಪಾಡಿಕೊಂಡು ಯಾವುದೇ ರೀತಿಯಲ್ಲಿ ಕಲಬೆರೆಕೆ ಮಾಡದೇ ಸಾಗಾಣಿಕೆ ಮಾಡಬೇಕು. ಒಕ್ಕೂಟದ ನಂದಿನಿ ಹಾಲು ಮತ್ತು ಹಾಲು ಉತ್ಪನ್ನಗಳ ಬಗ್ಗೆ ತಪ್ಪು ಮಾಹಿತಿ ನೀಡುವುದನ್ನು ಒಳಗೊಂಡು ಚ್ಯುತಿ ತರುವಂತಹ ಯಾವುದೇ ಕೆಲಸಗಳನ್ನು ಮಾಡಬಾರದು. ಸರಿಯಾದ ಸಮಯದಲ್ಲಿ ಮತ್ತು ಸಮರ್ಪಕವಾಗಿ ಸಂಘಗಳಿಗೆ/ಬಿ.ಎಂ.ಸಿ ಕೇಂದ್ರಗಳಿಗೆ ಹಾಲನ್ನು ಎತ್ತುವಳಿ ಮಾಡಲು ಮುತುವರ್ಜಿವಹಿಸಿ ಸಮಯ ಪಾಲನೆ ಮಾಡುವುದು. ಸಂಘಗಳಿಗೆ/ಒಕ್ಕೂಟಕ್ಕೆ ತೊಂದರೆಯಾಗುವ ರೀತಿಯಲ್ಲಿ ವರ್ತಿಸಿದಲ್ಲಿ ಗುತ್ತಿಗೆಯನ್ನು ರದ್ದುಪಡಿಸಿ ಗುತ್ತಿಗೆದಾರರ ಹೆಸರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.

24. ಕಿಲೋಮೀಟರ್ ಮತ್ತು ಮಾರ್ಗದ ಪಾಸಲೆ ಬದಲಾಗಬಹುದು. ಅದರಂತೆ ಕಿಲೋಮೀಟರ್ ಹೆಚ್ಚು ಅಥವಾ ಕಡಿಮೆಯಾಗಬಹುದು.

25. ಬಿ.ಎಂ.ಸಿ.ಹಾಲು ಶೇಖರಣಾ ಮಾರ್ಗದ ವಾಹನಗಳ ಪಥವನ್ನು ಕಛೇರಿಗೆ ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು. ಹಾಗೂ ಸಂಘಗಳನ್ನು ಕೈ ಬಿಡಬಹುದು ಅಥವಾ ಸೇರಿಸಬಹುದು.

26. ಮಾರ್ಗಗಳ ಪುನರ್ ವಿಂಗಡಣೆ ಮತ್ತು ಮಾರ್ಗಗಳ ಗುತ್ತಿಗೆ ರದ್ದುಮಾಡುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು/ಟೆಂಡರ್‌ದಾರರು ಬದ್ಧವಾಗಿರಬೇಕು.

27. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ (ಚಾಲಕರು/ಕಂಡಕ್ಟರ್)ವೇತನ/ ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

**ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಅಂಗೀಕರಿಸುವ /ತಿರಸ್ಕರಿಸುವ ಹಕ್ಕನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ.ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಶೇಮತಾಂ/ಡೇರಿ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ www.shimul.coop ಸಂಪರ್ಕಿಸಬಹುದು.**

ಸಹಿ/-

**ವ್ಯವಸ್ಥಾಪಕ ನಿರ್ದೇಶಕರು**
ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ

ದಿನಾಂಕ :25.10.2023
ಸ್ಥಳ : ಮಾಚೇನಹಳ್ಳಿ